ಕಲ್ಯಾಣ ಕರ್ನಾಟಕದ ಪ್ರತಿಬಿಂಬ......

ವಿಜಯನಗರ ಜಿಲ್ಲಾ ಆವೃತ್ತಿ

# ವಾರ್ತಾ ಲೋಕ

ಕನ್ನಡ ದಿನಪತ್ರಿಕೆ

"VARTHA LOKA" Kannada Daily Morning News Paper, VIJAYNAGAR. Dist.: Vijaynagar

ಕೊಪ್ಪಳ | ರಾಯಚೂರು | ಬಳ್ಳಾರಿ | ವಿಜಯನಗರ | ಯಾದಗಿರಿ | ಬೆಂಗಳೂರು | ಬೀದರ ಹಾಗೂ ಕಲಬುರ್ಗಿ ಜಿಲ್ಲೆಯಲ್ಲಿ ಏಕಕಾಲಕ್ಕೆ ಪ್ರಕಾಶಿತ

ಸಂಪಾದಕರು: ಎಸ್. ವಿ. ಕುಲಕರ್ಣಿ ಜಿ.

ಸ್ಥಾನಿಕ ಸಂಪಾದಕರು: ಮೊಹಮ್ಮದ ಜಿಲಾನ ಜಿ.

ವಾರ್ತಾ ಲೋಕ ಕನ್ನಡ ದಿನ ಪತ್ರಿಕೆ ಕಛೇರಿ ರಾಜಾಸಾಬ ಕಂಪೌಂಡ್, ಕುಲಾಯಪ್ಪ ಬಿಲ್ಡಿಂಗ್ ಎದುರುಗಡೆ, 1ನೇ ಕ್ರಾಸ್ ಪಟೇಲ್ ನಗರ, ಹೊಸಪೇಟೆ
ಮೊ.ನಂ : 9482156289

E-mail ID : varthalokahpt@gmail.com

VOLUME : 01 | ISSUE : 188 | Wednesday 11-12-2024 | RNI No.: KARKAN/2010/47633 | Page : 4+II | Mob. No. : 9482156289 | Price : ₹3/-

# ಅದಾನಿ ಮೇಲಿನ ಲಂಚ ಪ್ರಕರಣ ಸಮಗ್ರ ತನಿಖೆ ನಡೆಸಲು ಒತ್ತಾಯಿಸಿ ಸಿಪಿಐ ಪಕ್ಷ ರಾಷ್ಟ್ರಪತಿಗಳಿಗೆ ಮನವಿ

●ವಾರ್ತಾಲೋಕವಾರ್ತೆ

**ಕೂಡ್ಲಿಗಿ : ಡಿಸೆಂಬರ್ 10 :** ಭಾರತ ಕಮ್ಯುನಿಸ್ಟ್ ಪಕ್ಷ ತಾಲೂಕು ಸಮಿತಿ ನೇತೃತ್ವದಲ್ಲಿ ದೇಶ ವ್ಯಾಪ್ತಿ ಕರೆ ಬೆಂಬಲಿಸಿ ಆದಾನಿ ಮೇಲಿನ ಲಂಚ ಪ್ರಕರನದ ಕುರಿತು ಜೆಪಿಸಿ ಮೂಲಕ ತನಿಖೆ ನಡೆಸಲು ಒತ್ತಾಯಿಸಿ, ಮಣಿಪುರದಲ್ಲಿ ಶಾಂತಿ ಸ್ಥಾಪನೆಗೆ ಆಗ್ರಹಿಸಿ, ಕೋಮು ಭಾವನೆ ಕೆರಳಿಸಿ ಹಿಂಸಾಚಾರಕ್ಕೆ ಪ್ರಚೋದಿಸುತ್ತಿರುವುದರನ್ನುತಡೆಗಟ್ಟಲುಒತ್ತಾಯಿಸಿ,ಬೆಲೆಏರಿಕೆನಿರುದ್ಯೋಗ ಸಮಸ್ಯೆ ಪರಿಹರಿಸುವಲ್ಲಿ ವಿಫಲವಾಗಿರುವ ಕೇಂದ್ರ ಸರ್ಕಾರದ ಜನ ವಿರೋಧಿ ಆಡಳಿತವನ್ನು ಖಂಡಿಸಿ ವಿಶ್ವ ಮಾನವ ಹಕ್ಕುಗಳ ದಿನವಾದ ಡಿಸೆಂಬರ್ 10 ರಂದುಪ್ರತಿಭಟನೆನಡೆಸಿಸಲ್ಲಿಸುತ್ತಿರುವಮನವಿ.

ಆಡಳಿತ ನಡೆಸಲು ಬೇಕಾದ ಸರಳ ಬಹುಮತಗಳನ್ನು ಪಡೆಯಲಾಗದ ಬಿಜೆಪಿ ಇತರೆ ಪ್ರಾದೇಶಿಕ ಪಕ್ಷಗಳ ಬೆಂಬಲದೊಂದಿಗೆ ಮೂರನೇ ಬಾರಿಗೆ ಅಧಿಕಾರದಲ್ಲಿ ಮುಂದುವರಿದಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪ್ರಜಾತಂತ್ರ ವಿರೋಧಿ ಆಡಳಿತವನ್ನು ಮುಂದುವರಿಸಿದೆ. ದೇಶದಲ್ಲಿ ರೈತ ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮುಖ್ಯತೆ ನೀಡದೆ ಆದಾನಿ – ಅಂಬಾನಿಯಂತಹ ಬಂಡವಾಳಶಾಹಿಗಳ ಹಿತಾಸಕ್ತಿಗಾಗಿಯೇ ಅಧಿಕಾರ ಬಳಕೆಯಾಗುತ್ತಿದೆ.ನರೇಂದ್ರ ಮೋದಿ ಅವರ ಆಡಳಿತದಲ್ಲಿ ದೇಶ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದ್ದು ದೇಶದ ಜಿಡಿಪಿ ನಿರಂತರವಾಗಿ ಕುಸಿಯುತ್ತಿದೆ. ನಿರುದ್ಯೋಗಿಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದ್ದು ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಜನಸಾಮಾನ್ಯರು ಸಂಕಲ್ಪದಲ್ಲಿಯೇ ಬದುಕು ನಡೆಸುವಂತಾಗಿದೆ. ಸಂವಿಧಾನದ ಬಹುತ್ವದ ಆಶಯಗಳಿಗೆ ವಿರುದ್ಧವಾಗಿ ಏಕತ್ವದಪ್ರತಿಪಾದನೆಮುಂದುವರಿಸಿರುವಮೋದಿಸರ್ಕಾರಒಕ್ಕೂಟವ್ಯವಸ್ಥೆಗೆ ಮಾರಕವಾಗಲಿರುವ'ಒಂದುದೇಶಒಂದುಚುನಾವಣೆ'

ಎಂಬ ವಿಷಯವನ್ನು ಪದೇ ಪದೇ ಮುನ್ನೆಲೆಗೆ ತರುತ್ತಿದೆ. ಮಣಿಪುರ, ಉತ್ತರ ಪ್ರದೇಶಗಳು ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ಜಾತಿ ಜನಾಂಗೀಯ ಸಂಘರ್ಷಗಳು, ಕೋಮು ಭಾವನೆ ಕೆರಳಿಸಿ ಹಿಂಸಾಚಾರಗಳು ಭುಗಿಲೇಳುತ್ತಿದ್ದರೂ ಶಾಂತಿ ಸೌಹಾರ್ದತೆ ಬಲಪಡಿಸುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಈ ಹಿನ್ನೆಲೆಯಲ್ಲಿ ವಿಶ್ವಮಾನವ ಹಕ್ಕುಗಳ ದಿನವಾದ ಇಂದು ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ) ದೇಶಾದ್ಯಂತ ಪ್ರತಿಭಟನಾ ದಿನವಾಗಿ ಆಚರಿಸಲು ಕರೆ ನೀಡಿದ್ದು ಈ ಕೆಳಗಿನ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸುತ್ತದೆ.

**ಬೇಡಿಕೆಗಳು :**1). ಆದಾನಿ ಮೇಲಿನ ಲಂಚ ಪ್ರಕರಣದ ಕುರಿತು ಜೆಪಿಸಿ ಮೂಲಕ ಸಮಗ್ರತನಿಖೆ ನಡೆಸಿ : ಗೌತಮ್ ಆದಾನಿ ತಮ್ಮ ಸಂಸ್ಥೆಯ ಪರವಾಗಿ ವ್ಯಾಪಾರ ವಹಿವಾಟು ಒಪ್ಪಂದ ಮಾಡಿಕೊಳ್ಳಲು ಭಾರತದ ಸರ್ಕಾರಿ ಅಧಿಕಾರಿಗಳು ಸೇರಿದಂತೆಹಲವರಿಗೆಸಾವಿರಾರುಕೋಟಿರೂಪಾಯಿಲಂಚನೀಡಿದ್ದಾರೆಂದು ಅಮೇರಿಕಾದ ಪ್ರಾಸಿಕ್ಯೂಟರ್ಗಳು ಗಂಭೀರ ಸ್ವರೂಪದ ಆರೋಪ ಮಾಡಿದ್ದಾರೆ. ಲಾಭದಾಯಕವಾದ ಸೌರಶಕ್ತಿಯ ಪೂರೈಕೆಯಂತಹ ಉದ್ದಿಮೆಗಳನ್ನು




ಗುತ್ತಿಗೆ ಪಡೆಯಲು ಸಾವಿರಾರು ಕೋಟಿ ರೂಪಾಯಿ ಲಂಚ ನೀಡಿದ್ದಾರೆ ಎಂಬ ನ್ಯೂಯಾರ್ಕ್‌ನ ಪ್ರಾಸಿಕ್ಯೂಟರ್ಗಳ ದೋಷಾರೋಪಣೆಗಳ ಸತ್ಯಾಸತ್ಯತೆಯನ್ನು ಅರಿಯಲು ಹಾಗೂ ಇದರಲ್ಲಿ ಕೇಂದ್ರ ಸರ್ಕಾರದ ಪಾತ್ರ ಸೇರಿದಂತೆ ಸಮಗ್ರ ತನಿಖೆನಡೆಸಲುಸಂಸತ್ತಿನಜಂಟಿಸಂಸದೀಯಸಮಿತಿಯನ್ನುರಚಿಸಿ(ಜೆಪಿಸಿ) ಅಗತ್ಯಕ್ರಮಕೈಗೊಳ್ಳಬೇಕೆಂದುಸಿಪಿಐಆಗ್ರಹಪಡಿಸುತ್ತದೆ.

2).ಮಣಿಪುರದಲ್ಲಿಶಾಂತಿಸ್ಥಾಪನೆಗೆಆಗ್ರಹ:ಮಣಿಪುರದಲ್ಲಿಮೈತೆಯಿಮತ್ತು ಕುಕ್ಕಿಸಮುದಾಯಗಳನಡುವೆ

ನಿರಂತರವಾಗಿ ನಡೆಯುತ್ತಿರುವ ಜನಾಂಗೀಯ ಸಂಘರ್ಷವನ್ನು ತಡೆದು ಶಾಂತಿ ಸ್ಥಾಪಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ಜನಾಂಗೀಯ ಸಂಘರ್ಷದಲ್ಲಿ ಅಪಾರ ಸಂಖ್ಯೆಯ ಸಾವು ನೋವುಗಳು ಸಂಭವಿಸುತ್ತಿದ್ದು, ಸುಮಾರು 60 ಸಾವಿರಕ್ಕೂ ಹೆಚ್ಚು ಜನ ನಿರಾಶ್ರಿತರು ಕಳೆದ ಒಂದು ವರ್ಷಕ್ಕಿಂತಲೂ ಹೆಚ್ಚು ನಿರಾಶ್ರಿತರ ಶಿಬಿರದಲ್ಲಿ ತಂಗುವಂತಹ ದಾರುಣ ಪರಿಸ್ಥಿತಿ ನಿರ್ಮಾಣಗೊಂಡಿದೆ. ಮಣಿಪುರದಲ್ಲಿ ಶಾಂತಿ ನೆಲೆಸಲು ಅನುಕೂಲವಾಗುವಂತೆ ಅಲ್ಲಿನ ಪರಿಸ್ಥಿತಿಯ ಕುರಿತು ಸಂಸತ್ತಿನಲ್ಲಿ ಚರ್ಚಿಸಬೇಕು ಹಾಗೂ ಮಣಿಪುರದಲ್ಲಿ ಹೇರಲಾಗಿರುವ ಸಶಸ್ತ್ರ ಪಡೆಗಲ ವಿಶೇಷ ಅಧಿಕಾರ ಕಾಯ್ದೆಯನ್ನು (ಂಈಖಕಂ) ಹಿಂಪಡೆದು ಶಾಂತಿ ಸ್ಥಾಪನೆಗೆ ಮುಂದಾಗಬೇಕೆಂದುಸಿಪಿಐಒತ್ತಾಯಿಸುತ್ತದೆ.

3). ಕೋಮು ಭಾವನೆ ಕೆರಳಿಸುವ ಕೃತ್ಯಗಳನ್ನು ತಡೆಗಟ್ಟುವಂತೆ ಆಗ್ರಹಿಸಿ : ಉತ್ತರಪ್ರದೇಶಸೇರಿದಂತೆದೇಶದಹಲವು

ರಾಜ್ಯಗಳಲ್ಲಿ ಕೋಮು ಭಾವನೆ ಕೆರಳಿಸಿ ಹಿಂಸಾಚಾರಕ್ಕೆ ಪ್ರಚೋದಿಸುವಂತಹ ಕೃತ್ಯಗಳು ನಿರಂತರವಾಗಿ ನಡೆಯುತ್ತಿವೆ. ಮಸೀದಿ ಮಂದಿರಗಳ ವಿವಾದ ಕೇಂದ್ರವಾಗಿಸಿ ಧಾರ್ಮಿಕ ಸಾಮರಸ್ಯವನ್ನು ಹಾಳುಗೆಡವಲು ಕೋಮುವಾದಿ ಶಕ್ತಿಗಳು ನಿರತವಾಗಿವೆ. ಪ್ರಚೋದನಕಾರಿ ಹೇಳಿಕೆಗಳ ಮೂಲಕ ಶಾಂತಿ ಸೌಹಾರ್ದತೆಯನ್ನು ಕದಡುವಂತಹ ಕೃತ್ಯಗಳು ದಿನೇ ದಿನೇ ಹೆಚ್ಚುತ್ತಿವೆ. ಕೋಮು ಭಾವನೆ ಕೆರಳಿಸುವ ಕೃತ್ಯಗಳಿಗೆ ಕಡಿವಾಣ ಹಾಕಲು ಕಠಿಣ ಕ್ರಮ ಜರುಗಿಸಬೇಕೆಂದುಸಿಪಿಐಆಗ್ರಹಿಸುತ್ತದೆ.

4). ಬೆಲೆ ಏರಿಕೆ ತಡೆಗಟ್ಟಿ ನಿರುದ್ಯೋಗ ಸಮಸ್ಯೆ ಪರಿಹರಿಸಿ : ದೇಶದ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟಿದ್ದು ಜನಪರವಾದ ಆರ್ಥಿಕ ಧೋರಣೆ ಹಾಗೂ ಔದ್ಯಮಿಕನೀತಿಯನ್ನುಜಾರಿಗೊಳಿಸುವಲ್ಲಿಕೇಂದ್ರಸರ್ಕಾರಸಂಪೂರ್ಣವಾಗಿ ವಿಫಲವಾಗಿದೆ. ದೇಶದಲ್ಲಿ ನಿರುದ್ಯೋಗ ಸಮಸ್ಯೆ ಉಲ್ಬಣಿಸುತ್ತಿದೆ. ಜನಸಾಮಾನ್ಯರು ದಿನನಿತ್ಯ ಉಪಯೋಗಿಸುವ ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರಿವೆ. ಬೆಲೆ ಏರಿಕೆ ಹಾಗು ನಿರುದ್ಯೋಗ ಸಮಸ್ಯೆಯು ಜನರ ಬದುಕನ್ನು ದುಸ್ತರಗೊಳಿಸಿದೆ. ಬೆಲೆ ಏರಿಕೆಯನ್ನು ತಡೆಗಟ್ಟಿ ನಿರುದ್ಯೋಗ ಸಮಸ್ಯೆ ನಿವಾರಿಸಲುಸೂಕ್ತಕ್ರಮಕೈಗೊಳ್ಳಬೇಕೆಂದುಸಿಪಿಐಒತ್ತಾಯಿಸುತ್ತದೆ.

5). ಕೂಡ್ಲಿಗಿ ಕೃಷಿ ಉತ್ಪಾದನೆ ಮಾರುಕಟ್ಟೆ (ಂಕಒಅ) ಖರೀದಿ ಕೇಂದ್ರಗಳನ್ನ ಪ್ರಾರಂಭಿಸದೇ ರೈತರಿಗೆ ವಂಚಿಸಿ ದಲ್ಲಾಳಿಗಳು ವರ್ತಕರು, ಅಧಿಕಾರಿಗಳ ಮಧ್ಯೆ ಒಪ್ಪಂದದಂತೆ ಕೂಡ್ಲಿಗಿ ಕೃಷಿ ಮಾರುಕಟ್ಟೆಯಲ್ಲಿ ರೈತರು ಬೆಳೆದ ಬೆಳೆಗಳನ್ನ ಖರೀದಿಸಲು ಖರೀದಿ ಕೇಂದ್ರಗಳನ್ನ ಪ್ರಾರಂಭ ಮಾಡದೇ ಇರುವ ವ್ಯಾಪಾರಸ್ಥರು ಈಗಾಗಲೇ ಪರವಾನಿಗೆ ಪಡೆದಿದ್ದು ಮತ್ತು ಕೃಷಿ ಮಾರುಕಟ್ಟೆಯಲ್ಲಿ ತಮ್ಮದೇ ಆದ ಕಟ್ಟಡಗಳನ್ನೂ ಕಟ್ಟಿಕೊಂಡಿದ್ದರೂ ಸಹ ಕೃಷಿ ಮಾರುಕಟ್ಟೆಯಲ್ಲಿಖರೀದಿಕೇಂದ್ರಗಳನ್ನುಪ್ರಾರಂಭಮಾಡಿರುವುದಿಲ್ಲ.ಕಾರಣ, ಅವರುಗಳ ಪರವಾನಿಗೆಗಳನ್ನ ರದ್ದು ಗೊಳಿಸಿ. ಬೇರೆಯವರಿಗೆ ಪರವಾನಿಗೆ ನೀಡಿಕೂಡಲೇಖರೀದಿಕೇಂದ್ರಗಳನ್ನುಪ್ರಾರಂಭಿಸಿ.

6), ಕೂಡ್ಲಿಗಿ ಕೃಷಿ ಉತ್ಪನ್ನ ಮಾರುಕಟ್ಟೆ ರೈತರ ಖರೀದಿ ಕೇಂದ್ರಗಳ ಮಳಿಗೆಗಳಾಗದೇ ಕಟ್ಟಡಗಳು ಸಿಮೆಂಟ್ ವ್ಯಾಪಾರದ ಗೋಡನ್ ಗಳಾಗಿ, ಪೈಪ್ ಫ್ಯಾಕ್ಟರಿಗಳಾಗಿ ಕೂಡ್ಲಿಗಿ ಕೃಷಿ ಉತ್ಪನ್ನ ಮಾರುಕಟ್ಟೆ ಕಟ್ಟಡಗಳು ಸಿಮೆಂಟ್ ವ್ಯಾಪಾರ ಕೇಂದ್ರಗಳಾಗಿವೆ. ಕೃಷಿ ಮಾರುಕಟ್ಟೆಯ ಕಾರ್ಯದರ್ಶಿಯವರ ಗಮನಕ್ಕೆತಂದರುಕ್ರಮಕೈಗೊಳ್ಳದೇಸಿಮೆಂಟ್‌ವ್ಯಾಪಾರಿಗಳಜೊತೆಷಾಮೀಲ್ ಆಗಿ ರೈತರ ವ್ಯಾಪಾರ ಕೇಂದ್ರಗಳನ್ನು ಪ್ರಾರಂಭ ಮಾಡದೇ ಕೃಷಿ ಮಾರುಕಟ್ಟೆ ಕಾಯ್ದೆಯನ್ನು ಉಲ್ಲಂಘನೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಕೂಡಲೇರೈತರಖರೀದಿಕೇಂದ್ರಗಳನ್ನುಪ್ರಾರಂಭಮಾಡಬೇಕು.

7). ರದ್ದಾಗಿರುವ ಪಡಿತರ ಕಾರ್ಡ್‌ಗಳು ಮುಂಜೂರಾತಿ ನೀಡಿದ್ದೀರಿ, ಆದರೆ ಮುಂಜೂರಾತಿ ನೀಡಿದ ಕಾರ್ಡ್‌ಗಳಿಗೆ ನ್ಯಾಯಬೆಲೆ ಅಂಗಡಿಗಳಲ್ಲಿ ರೇಷನ್ ನೀಡುತ್ತಿಲ್ಲ.ಕೂಡಲೇಸರ್ಕಾರದಿಂದರೇಷನ್‌ವಿತರಿಸಬೇಕು.

ಈ ಮೇಲಿನ ಬೇಡಿಕೆಗಳನ್ನು ಈಡೇರಿಸುವ ಮೂಲಕ ಸಂವಿಧಾನದ ಆಶಯಗಳಿಗನುಗುಣವಾಗಿ ಮಾನವ ಹಕ್ಕುಗಳನ್ನು ರಕ್ಷಿಸಲು ಮುಂದಾಗಬೇಕೆಂದು ಕೋರುತ್ತೇವೆ. ಈ ಸಂದರ್ಭದಲ್ಲಿ ಎಚ್ ವೀರಣ್ಣ ಜಿಲ್ಲಾ ಕಾರ್ಯದರ್ಶಿಗಳುಸಿಪಿಐಪಕ್ಷಕರಿಯಪ್ಪತಾಲೂಕುಕಾರ್ಯದರ್ಶಿಸಿಪಿಐಪಕ್ಷ ಮಂಜು ಗುಡೆಕೋಟೆ ವೈ ಮಲ್ಲಿಕಾರ್ಜುನ ಸಹಕಾರದರ್ಶಿಗಳು ಯು ಪೆನ್ನಪ್ಪ ಖಜಾಂಚಿಮಮತಾಓಬಳಸಿಸಾಡಿದೊಡ್ಡಪ್ಪಕರಿಯಪ್ಪಕೊಟ್ರೇಶ್‌ಹೊನ್ನೂರ ಲೋಕೇಶ್‌ಮಾರಪ್ಪಮುಂತಾದಕಾರ್ಯಕರ್ತರುಭಾಗವಹಿಸಿದ್ದರು.

**ವರದಿಹೆಚ್ಚುವೀರಣ್ಣ**

# ಉದ್ಯಮಿ ಆದಾನಿಯವರ ಲಂಚ ಪ್ರಕರಣ: ಜೆ.ಪಿ.ಸಿ ಮೂಲಕ ತನಿಖೆಗೆ ಸಿಪಿಐ ಆಗ್ರಹ

● ವಾರ್ತಾಲೋಕ ವಾರ್ತೆ

**ಹೂವಿನಹಡಗಲಿ: ಡಿಸೆಂಬರ್ 10 :** ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ) ತಾಲೂಕು ಮಂಡಳಿ ನೇತೃತ್ವದಲ್ಲಿ ಅದಾನಿ ಮೇಲಿನ ಲಂಚ ಪ್ರಕರಣದ ಕುರಿತು ಜೆಪಿಸಿ ಮೂಲಕ ತನಿಖೆ ನಡೆಸಲು ಒತ್ತಾಯಿಸಿ,ಮಣಿಪುರದಲ್ಲಿ ಶಾಂತಿ ಸ್ಥಾಪನೆಗೆ ಆಗ್ರಹಿಸಿ, ಕೋಮು ಭಾವನೆ ಕೆರಳಿಸಿ ಹಿಂಸಾಚಾರಕ್ಕೆ ಪ್ರಚೋದಿಸುತ್ತಿರುವುದನ್ನು ತಡೆಗಟ್ಟಲು, ಬೆಲೆ ಏರಿಕೆ ನಿರುದ್ಯೋಗ ಸಮಸ್ಯೆ ಪರಿಹರಿಸುವಲ್ಲಿ ವಿಫಲವಾಗಿರುವ ಕೇಂದ್ರ ಸರ್ಕಾರದ ಜನ ವಿರೋಧಿ ಆಡಳಿತವನ್ನು ಖಂಡಿಸಿ ವಿಶ್ವ ಮಾನವ ಹಕ್ಕುಗಳ ದಿನವಾದ ಇಂದು ಘನ ವೇತ್ತ ರಾಷ್ಟ್ರೀಪತಿಗಳು ಗಮನ ಹರಿಸಬೇಕು

ಆಡಳಿತ ನಡೆಸಲು ಬೇಕಾದ ಸರಳ ಬಹುಮತಗಳನ್ನು ಪಡೆಯಲಾಗದ ಬಿಜೆಪಿ ಇತರೆ ಪ್ರಾದೇಶಿಕ ಪಕ್ಷಗಳ ಬೆಂಬಲದೊಂದಿಗೆ ಮೂರನೇ ಬಾರಿಗೆ ಅಧಿಕಾರದಲ್ಲಿ ಮುಂದುವರಿದಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪ್ರಜಾತಂತ್ರ ವಿರೋಧಿ ಆಡಳಿತವನ್ನು ಮುಂದುವರಿಸಿದೆ. ದೇಶದಲ್ಲಿ ರೈತ ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮುಖ್ಯತೆ ನೀಡದೆ ಆದಾನಿ – ಅಂಬಾನಿಯಂತಹ ಬಂಡವಾಳಶಾಹಿಗಳ ಹಿತಾಸಕ್ತಿಗಾಗಿಯೇ ಅಧಿಕಾರ ಬಳಕೆಯಾಗುತ್ತಿದೆ. ನರೇಂದ್ರ ಮೋದಿ ಅವರ ಆಡಳಿತದಲ್ಲಿ




ದೇಶ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದ್ದು ದೇಶದ ಜಿಡಿಪಿ ನಿರಂತರವಾಗಿ ಕುಸಿಯುತ್ತಿದೆ, ನಿರುದ್ಯೋಗಿಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದ್ದು ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಜನಸಾಮಾನ್ಯರು ಸಂಕಷ್ಟದಲ್ಲಿಯೇ ಬದುಕು ನಡೆಸುವಂತಾಗಿದೆ. ಸಂವಿಧಾನದ ಬಹುತ್ವದ ಆಶಯಗಳಿಗೆ ವಿರುದ್ಧವಾಗಿ ಏಕತ್ವದ ಪ್ರತಿಪಾದನೆ ಮುಂದುವರಿಸಿರುವ ಮೋದಿ ಸರ್ಕಾರ ಒಕ್ಕೂಟ ವ್ಯವಸ್ಥೆಗೆ ಮಾರಕವಾಗಲಿರುವ 'ಒಂದು ದೇಶ ಒಂದು ಚುನಾವಣೆ' ಎಂಬ ವಿಷಯವನ್ನು ಪದೇ ಪದೇ ಮುನ್ನೆಲೆಗೆ ತರುತ್ತಿದೆ. ಮಣಿಪುರ, ಉತ್ತರ ಪ್ರದೇಶಗಳು ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ಜಾತಿ ಜನಾಂಗೀಯ ಸಂಘರ್ಷಗಳು, ಕೋಮು ಭಾವನೆ ಕೆರಳಿಸಿ ಹಿಂಸಾಚಾರಗಳು ಭುಗಿಲೇಳುತ್ತಿದ್ದರೂ ಶಾಂತಿ ಸೌಹಾರ್ದತೆ ಬಲಪಡಿಸುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ.

ಎಂದು ಪಕ್ಷದ ಕಾರ್ಯದರ್ಶಿ ಹಲಗಿ ಸುರೇಶ ಮಾತನಾಡಿದರು.ಬಾವಾಜಿ ಜಂಗ್ಲಿ ಸಾಬ್ ಮಾತನಾಡಿ ಈ ಹಿನ್ನೆಲೆಯಲ್ಲಿ ವಿಶ್ವಮಾನವ ದಿನವಾದ ಇಂದು ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ) ದೇಶಾದ್ಯಂತ ಪ್ರತಿಭಟನಾ ದಿನವಾಗಿ ಆಚರಿಸಲು ಕರೆ ನೀಡಿದ್ದು ರೈತರ.ಕಾರ್ಮಿಕರ ಬೇಡಿಕೆಗಳ ಈಡೇರಿಕೆಗಾಗಿ

1) ಆದಾನಿ ಮೇಲಿನ ಲಂಚ ಪ್ರಕರಣದ ಕುರಿತು ಜೆಪಿಸಿ ಮೂಲಕ ಸಮಗ್ರ ತನಿಖೆ ನಡೆಸಿ: ಗೌತಮ್ ಆದಾನಿ ತಮ್ಮ ಸಂಸ್ಥೆಯ ಪರವಾಗಿ ವ್ಯಾಪಾರ ವಹಿವಾಟು ಒಪ್ಪಂದ ಮಾಡಿಕೊಳ್ಳಲು ಭಾರತದ ಸರ್ಕಾರಿ ಅಧಿಕಾರಿಗಳು ಸೇರಿದಂತೆ ಹಲವರಿಗೆ ಸಾವಿರಾರು ಕೋಟಿ ರೂಪಾಯಿ ಲಂಚ ನೀಡಿದ್ದಾರೆಂದು ಅಮೆರಿಕಾದ ಪ್ರಾಸಿಕ್ಯೂಟರ್ಗಳು ಗಂಭೀರ ಸ್ವರೂಪದ ಆರೋಪ ಮಾಡಿದ್ದಾರೆ. ಲಾಭದಾಯಕವಾದ ಸೌರಶಕ್ತಿಯ ಪೂರೈಕೆಯಂತಹ ಉದ್ದಿಮೆಗಳನ್ನು ಗುತ್ತಿಗೆ ಪಡೆಯಲು ಸಾವಿರಾರು ಕೋಟಿ ಲಂಚ ನೀಡಿದ್ದಾರೆ ಎಂಬ ನ್ಯೂಯಾರ್ಕ್ನ ಪ್ರಾಸಿಕ್ಯೂಟರ್‌ಗಳ ದೋಷಾರೋಪಣೆಗಳ ಸತ್ಯಾಸತ್ಯತೆಯನ್ನು ಅರಿಯಲು ಹಾಗೂ ಇದರಲ್ಲಿ ಕೇಂದ್ರ ಸರ್ಕಾರದ ಪಾತ್ರ ಸೇರಿದಂತೆ ಸಮಗ್ರ ತನಿಖೆ ನಡೆಸಲು ಸಂಸತ್ತಿನ ಜಂಟಿ ಸಂಸದೀಯ ಸಮಿತಿಯನ್ನು ರಚಿಸಿ (ಜೆಪಿಸಿ) ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸಿಪಿಐ ಆಗ್ರಹಪಡಿಸುತ್ತದೆ. ಎಂದರು.

ಡಿ.ಮುಕುಂದ ಗೌಡ.ಯೋಗಿಶ್.ಸೋಮಣ್ಣ. ಕೊಟ್ರೇಶ್. ಮಹಮದ್.ಭರತ್. ವೇಂಕಟೇಶ್.ನಾಗರಾಜ್.ಇತರರು ಇದ್ದರು ಮನವಿಯನ್ನು ತಹಶೀಲ್ದಾರ್ ಸಂತೋಷ್ ರವರಿಗೆ ಮನವಿ ಸಲ್ಲಿಸಲಾಯಿತು.

**ವರದಿ ಸುರೇಶ್ ಹಲಿಗೆ**

# ಶರಣ ಗ್ರಾಮ ಗುಳೆ ಗ್ರಾಮದಲ್ಲಿ ರಾಷ್ಟ್ರೀಯ ಬಸವದಳದ ವತಿಯಿಂದ ನೂತನವಾಗಿ ನಿರ್ಮಾಣಗೊಂಡ ಅನುಭವ ಮಂಟಪ ಹಾಗೂ ವಿಶ್ವ ಗುರು ಬಸವಣ್ಣನವರ ಮೂರ್ತಿಯ ಅನಾವರಣ

● ವಾರ್ತಾಲೋಕ ವಾರ್ತೆ

**ಯಲಬುರ್ಗಾ:ಡಿಸೆಂಬರ್ 10:**ತಾಲೂಕಿನ ಶರಣ ಗ್ರಾಮ ಗುಳೆ ಗ್ರಾಮದಲ್ಲಿ ರಾಷ್ಟ್ರೀಯ ಬಸವದಳದ ವತಿಯಿಂದ ನೂತನವಾಗಿ ನಿರ್ಮಾಣಗೊಂಡ ಅನುಭವ ಮಂಟಪ ಹಾಗೂ ವಿಶ್ವ ಗುರು ಬಸವಣ್ಣನವರ ಮೂರ್ತಿಯ ಅನಾವರಣ ಕಾರ್ಯಕ್ರಮ ಜರಗಿತು ಬೆಳಿಗ್ಗೆ ಇಷ್ಟಲಿಂಗ ಪೂಜೆ, ವಚನ ಪಠಣಗಳೊಂದಿಗೆ ಬಸವಧರ್ಮ ಪೀಠದ ದ್ವಿತೀಯ ಮಹಿಳಾ ಜಗದ್ಗುರುಗಳು ಹಾಗೂ ಬಸವಧರ್ಮ ಪೀಠಾಧ್ಯಕ್ಷ ಡಾ.ಗಂಗಾ ಮಾತಾಜಿ ನೂತನ ಅನುಭವ ಮಂಟಪ ಲೋಕಾರ್ಪಣೆ ಗೈದರು

ನಂತರ ಬಸವಧರ್ಮ ಪೀಠದ ದ್ವಿತೀಯ ಮಹಿಳಾ ಜಗದ್ಗುರುಗಳು ಹಾಗೂ ಬಸವಧರ್ಮ ಪೀಠಾಧ್ಯಕ್ಷ ಡಾ.ಗಂಗಾ ಮಾತಾಜಿ ಮಾತನಾಡೀ ಅವರು ಅನುಭವ ಮಂಟಪ ಸಾಮಾಜಿಕ ರಾಜಕೀಯ ಶೈಕ್ಷಣಿಕ ಮತ್ತು ಸಾಮಾನ್ಯ ಜ್ಞಾನದ ಬಗ್ಗೆ ಆಸಕ್ತಿ ಇರುವ ಬಹುತೇಕ ಎಲ್ಲರಿಗೂ ಇದು ತಿಳಿದಿರುತ್ತದೆ. ಇದರ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದೆ ಸಾಮಾನ್ಯ ಜನರಿಗಾಗಿ ಒಂದಷ್ಟು ಸರಳವಾಗಿ ಹೇಳುವುದಾ

12 ನೇ ಶತಮಾನದಲ್ಲಿ ಬಸವಕಲ್ಯಾಣದ ಬಳಿ ಸ್ಥಾಪಿತವಾದ ಒಂದು ಅನುಭವ ಮಂಟಪ ಅನುಭವದ ಆಧಾರದ ಮೇಲೆ ಮೂಡಿದ ಜ್ಞಾನವನ್ನು ಹಂಚಿಕೊಳ್ಳಲು ಚಿಂತಕರ ಚಾವಡಿಯ ಒಂದು ಪ್ರಜಾಸತ್ತಾತ್ಮಕ ಚರ್ಚಾ ಕೂಟ ಅಥವಾ ವೇದಿಕೆ ಎಂದು ಹೇಳಬಹುದು. 1924ರಲ್ಲಿ ಮಹಾತ್ಮಾ ಗಾಂಧೀಜಿ ಬೆಳಗಾವಿಗೆ ಬಂದಾಗ ಹರ್ಡೇಕರ ಮಂಜಪ್ಪನವರು ಬಸವಾದಿ ಶರಣರ ವಚನಗಳ ಬಗ್ಗೆ ಹತ್ತು ನಿಮಿಷಗಳ ಕಾಲ ಚರ್ಚೆ ಮಾಡಿ ತಿಳಿಸಿದ್ದಾರೆ ಬಸವೇಶ್ವರ ಬಗ್ಗೆ ನಿಮ್ಮ ಅಭಿಪ್ರಾಯ ತಿಳಿಸಿ ಎಂದು ಗಾಂಧೀಜಿ ಯವರನ್ನ ಮಾಧ್ಯಮದವರು ಕೇಳಿದಾಗ

ಕರ್ನಾಟಕದ ಬಸವಣ್ಣನವರು ಜಗತ್ತಿಗೆಲ್ಲ ಒಳ್ಳೆಯ ಸಂದೇಶ ರವಾನಿಸಿದ್ದಾರೆ ನಾನು ಏನು ಹೇಳಲಿ ಅವರ ಅನುಯಾಯಿಗಳಾದ ನೀವೂ ಜಗತ್ತನ್ನೆ ನೀವೂ ಉದ್ದಾರ ಮಾಡಬಲ್ಲವರು ನೀವೂ ಎಂದು ಹೇಳಿದ್ದಾರೆ ಎಂದು ಹರ್ಡೇಕರ್ ಮಂಜಪ್ಪನವರು ಮಹಾತ್ಮಾ ಗಾಂಧೀಜಿಯವರನ್ನ ಸ್ಮರಿಸಿದರು

ವಚನಗಳು ಸಮಾನತೆಯ ಸಾಮಾಜಿಕ ಕ್ರಾಂತಿಯಲ್ಲಿ ಮಹತ್ವದ ಪಾತ್ರ ತಿಳಿಸಲು ಅನುಭವ ಮಂಟಪದ್ದಾಗಿದೆ ಗುಳೆ ಗ್ರಾಮದಲ್ಲಿ ಅನುಭವ ಮಂಟಪ ಲೋಕಾರ್ಪಣೆ ಮಾಡಿದರೆ ಸಾಲದು




ಪ್ರತಿವಾರ ಪ್ರತಿತಿಂಗಳಿಗೆ ಒಂದು ಬಾರಿ ವಚನಗಳು ಅನುಸಂಧಾನ ನಡೆಯ ಬೇಕಾಗಿದೆ ಗುಳೆ ಗ್ರಾಮದಲ್ಲಿ ನಿರ್ಮಾಣವಾದ ಅನುಭವ ಮಂಟಪ ಇತರರಿಗೂ ಮಾರ್ಗ ದರ್ಶನವಾಗಲಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ತಿಮ್ಮನಗೌಡ ಚಿಕ್ಕದಾಗಿ ಶಿವಶಂಕರ ರಾವ್ ದೇಸಾಯಿ.ಮಕ್ಕಳ್ಳಿಯ ಶಿವಾನಂದ ಮಠದ ಶಿವಾನಂದ ಮಹಾಸ್ವಾಮಿ ಹುಕ್ಕೇರಿಯ ಬಸವ ಬೆಳವಿ ಗ್ರಾಮದ ಚರಮೂರ್ತಿ ಚಿರಂತೇಶ್ವರ ವಿರಕ್ತಮಠ ಶರಣ ಬಸವ ಸ್ವಾಮಿ ಮಾತನಾಡಿದರು.

ಪ್ರಾಸ್ತಾವಿಕವಾಗಿ ಶರಣಪ್ಪ ಹೊಸಳ್ಳಿ ಮಾತನಾಡಿದದರು

ಮನಗೂಳಿಯ ವಿರತಿಶಾನಂದ ಸ್ವಾಮಿಜಿ ಮಾತನಾಡಿ

ಸರ್ಕಾರ ಬಸವಕಲ್ಯಾಣದಲ್ಲಿ ಕೋಟ್ಯಂತರ ರೂಪಾಯಿ ಖರ್ಚುಮಾಡಿ ಅನುಭವ ಮಂಟಪ ನಿರ್ಮಿಸಲಾಗಿದೆ ಆದರೆ ಇಲ್ಲಿ ಬಸವಾದಿ ಶರಣ ಭಕ್ತರೆ ಸೇರಿಕೊಂಡು ಸ್ವತಹ ಅನುಭವ ಮಂಟಪ ನಿರ್ಮಿಸಿದ್ದಾರೆ ವಾರಕ್ಕೊಂದು ಒಂದು ಬಾರಿ ಅಥವಾ ತಿಂಗಳಿಗೊಮ್ಮೆ ಯಾದರು ವಚನಗಳ ಚಿಂತನೆ ಮಾಡಿಕೊಂಡು ಅನುಭವ ಮಂಟಪ ಸದುಪಯೋಗ ಪಡೆದುಕೊಳ್ಳಬೇಕು ಮಕ್ಕಳಿಗೆ ಮೊಬೈಲ್ ರೂಡಿ ಮಾಡಿದರೆ ಮೊಬೈಲ್ ರೂಢಿಯಾಗುತ್ತದೆ ನಾವೂ ಪುಸ್ತಕ ಹಿಡಿದುಕೊಂಡು ಕುಳಿತರೆ ಮಕ್ಕಳು ಪುಸ್ತಕ ಹಿಡಿಯುತ್ತಾರೆ ಆದ್ದರಿಂದ ನಿಮ್ಮ ಮಕ್ಕಳಿಗೆ ಪುಸ್ತಕಗಳನ್ನ ಕೋಡಿ ಮಕ್ಕಳಿಗೆ ವಚನಗಳನ್ನು ಕಲಿಸುವ ಕೆಲಸ ಮಾಡಿ ಎಂದು ಹೇಳಿದರು.

ಡಾ,ರಮೇಶ ಡಾಣಿ, ಬಸವೇಶ್ವರರ ಕುರಿತು ಉಪನ್ಯಾಸ ಕಾರ್ಯಕ್ರಮದಲ್ಲಿ ಬಸವನಗೌಡ ಪೋಲೀಸ್ ಪಾಟೀಲ್, ಶಿವಶಂಕರ ರಾವ್,ದೇಸಾಯಿ, ಕೊಪ್ಪಳ ಜಿಲ್ಲಾ ಬಸವೇಶ್ವರ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ರಾಜೇಶ್ ಸಸಿಮಠ.ತಿಮ್ಮನಗೌಡ ಚಿಲ್ಕರಾಗಿ ,ಗಂಗಮ್ಮ ವೀರಭದ್ರಪ್ಪ ಕುರುಂದಾ,ಕರೆಗೌಡ ಕುರಕುಂದಾ, ,ಶರಣಬಸಪ ಬ್ಯಾಲಿಹಾಳ ,ಬಸವರಾಜಪ್ಪ ಇಂಗಳದಾಳ,,ಅಮರೇಶಪ್ಪ ಬಳ್ಳಾರಿ, ಅಮರೇಶಪ್ಪಗಡಿಹಳ್ಳಿರುದ್ರಪ್ಪಸೂಳಿಕೇರಿ. ಹರ್ಷಾನಂದ ಗುರೂಜಿ,ಕಳಕಪ್ಪ ವಿವೇಕ.ರೇಣುಕಪ್ಪ ಮಂತ್ರಿ ಬಸವರಾಜ ಹೂಗಾರ,ದೇವಪ್ಪ ವನಜಭಾವಿ, ನಾಗನಗೌಡ ಜಾಲಿಹಾಳ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

**ವರದಿ ಮಂಗಳೇಶ ಮಂಗಳೂರು**

## ಸಂಕ್ಷಿಪ್ತ ವಾರ್ತೆ

### ಮಾಜಿ ಸಿಎಂ ಎಸ್‌ಎಂ ಕೃಷ್ಣ ನಿಧನ: ಶಾಸಕ ಭರತ್ ರೆಡ್ಡಿ ಸಂತಾಪ

● ವಾರ್ತಾಲೋಕ ವಾರ್ತೆ

**ಬೆಳಗಾವಿ/ಬಳ್ಳಾರಿ, ಡಿ.10:** ರಾಜ್ಯ ಕಂಡ ಧೀಮಂತ ರಾಜಕಾರಣಿ, ಮಾಜಿ ಸಿಎಂ ಎಸ್.ಎಂ.ಕೃಷ್ಣ ಅವರ ಸಾವಿಗೆ ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿಯವರು ಸಂತಾಪ ವ್ಯಕ್ತಪಡಿಸಿದ್ದಾರೆ. ಈ ಕುರಿತು ಮಂಗಳವಾರ ಪತ್ರಿಕಾ ಪ್ರಕಟಣೆ ಮೂಲಕ ತಮ್ಮ ಸಂತಾಪ ವ್ಯಕ್ತಪಡಿಸಿದ ಭರತ್ ರೆಡ್ಡಿ, ಎಸ್.ಎಂ.ಕೃಷ್ಣ ದೇಶ ಮತ್ತು ರಾಜ್ಯ ಕಂಡ ಧೀಮಂತ ನಾಯಕ, ಸರ್ಕಾರಿ ಶಾಲೆಗಳಲ್ಲಿ ಮಧ್ಯಾಹ್ನದ ಬಿಸಿಯೂಟ ಆರಂಭಿಸುವ ಮೂಲಕ ಶೈಕ್ಷಣಿಕ ಕ್ಷೇತ್ರದಲ್ಲಿ ಕ್ರಾಂತಿಯನ್ನು ತಂದರು, ಬೆಂಗಳೂರನ್ನು ಐಟಿ–ಬಿಟಿ ಹಬ್ ಮಾಡುವುದರಲ್ಲಿ ಅವರ ಪಾತ್ರವನ್ನು ಮರೆಯಲಾಗದು ಎಂದು ಎಸ್ ಎಂ ಕೃಷ್ಣ ಅವರ ಕಾರ್ಯವನ್ನು ಶ್ಲಾಘಿಸಿದರು.

ಯುಪಿಎ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ವಿದೇಶಾಂಗ ಸಚಿವರಾಗಿ ಹಲವು ಚಾರಿತ್ರಿಕ ನಿರ್ಣಯ ಕೈಗೊಂಡಿದ್ದಾರೆ, ರಾಜ್ಯದ ದೇಶದ ನಿರ್ಮಾಣದಲ್ಲಿ ಎಸ್.ಎಂ.ಕೃಷ್ಣ ಅವರ ಕೊಡುಗೆ ಅಪಾರವಾದುದು

ಅವರ ನಿರ್ಗಮನ ನಾಡಿನ ರಾಜಕಾರಣದಲ್ಲಿ ತುಂಬಲಾರದ ನಷ್ಟ, ರಾಜಕೀಯ ಬದುಕಿನ ಮೌಲ್ಯಗಳು ನಮ್ಮಂತಹ ಕಿರಿಯರಿಗೆ ದಾರಿದೀಪ ಎಂದು ಶಾಸಕ ನಾರಾ ಭರತ್ ರೆಡ್ಡಿ ಅಭಿಪ್ರಾಯಪಟ್ಟಿದ್ದಾರೆ.

### ವಾಹನ ಡಿಕ್ಕಿ ಬೈಕ್ ಸವಾರ ಸಾವು, ಇಬ್ಬರಿಗೆ ಗಾಯ

● ವಾರ್ತಾಲೋಕ ವಾರ್ತೆ

**ಕೂಡ್ಲಿಗಿ: ಡಿಸೆಂಬರ್ 10 :** ತಾಲೂಕಿನ ಗುಡೇಕೋಟೆಯ ಎಕ್ಕೆಗುಂದಿ–ಹುರುಳಿಹಾಳ್ ರಸ್ತೆಯ ಎಕ್ಕೆಗುಂದಿ ಗ್ರಾಮದ ಬಸಪ್ಪನ ಮರದ ಹತ್ತಿರ ಬೊಲೋರೋ ವಾಹನ ಡಿಕ್ಕಿ ಪರಿಣಾಮ ಸ್ಥಳದಲ್ಲಿಯೇ ಎಕ್ಕೆಗುಂದಿ ಗ್ರಾಮದ ಲಿಂಗಮೂರ್ತಿ(23) ಸಾವನ್ನಪ್ಪಿದ್ದಾನೆ. ಉಳಿದ ಇಬ್ಬರು ಮಹೇಶ್, ಶ್ರೀನಿವಾಸ್(20) ಗಾಯಾಳುಗಳಾಗಿದ್ದಾರೆ. ಕೆಳಗಿನಕಾರನಹಟ್ಟಿ ಗ್ರಾಮಕ್ಕೆ

ಶ್ರೀನಿವಾಸನ ಹೊಸ ಮೋಟರ್ ಬೈಕ್‌ನಲ್ಲಿ ಮೂವರು ಪ್ರಯಾಣ ಮಾಡಿ ಸ್ವಗ್ರಾಮ ಎಕ್ಕೆಗುಂದಿಗೆ ಮರಳುವಾಗ, ಬಸಪ್ಪನ ಮರದ ಹತ್ತಿರ ಬೊಲೋರೋ ವಾಹನ ಎದುರಿನಿಂದ ಡಿಕ್ಕಿಯಾಗಿದೆ. ಲಿಂಗಮೂರ್ತಿಯ ಬಲ ತಲೆಗೆ ಭಾರಿ ರಕ್ತಗಾಯವಾಗಿ ಸ್ಥಳದಲ್ಲಿ ಮೃತ ಪಟ್ಟಿದ್ದಾರೆ. ಮಹೇಶನ ಬಲಗಾಲಿಗೆ, ಎಡ ಕೈಗೆ, ಶ್ರೀನಿವಾಸನಿಗೆ ಬಲಗಾಲಿಗೆ ಒಳಪೆಟ್ಟಾಗಿದ್ದು, ಸಣ್ಣಪುಟ್ಟ ಗಾಯಗಳಾಗಿವೆ. ಚಾಲಕ ತಪ್ಪಿಸಿಕೊಂಡಿದ್ದಾನೆ. ವಾಹನವನ್ನು ಪತ್ತೆ ಮಾಡಿದ ಗುಡೇಕೋಟೆ ಪೊಲೀಸರು ಪ್ರಕರಣವನ್ನು ಮೃತ ತಂದೆ ನೀಡಿದ ದೂರಿನನ್ವಯ ದಾಖಲಿಸಿಕೊಂಡಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

**ವರದಿ ಹೆಚ್ಚು ವೀರಣ್ಣ**

### ಮಾನವ ಹಕ್ಕುಗಳ ಕುರಿತ ಪ್ರತಿಜ್ಞಾವಿಧಿ ಬೋಧನೆ



● ವಾರ್ತಾಲೋಕ ವಾರ್ತೆ

**ಮರಿಯಮ್ಮನಹಳ್ಳಿ ಡಿ. 10:** ವಿಶ್ವಮಾನವ ಹಕ್ಕುಗಳ ದಿನಾಚರಣೆಯ ಅಂಗವಾಗಿ ಮರಿಯಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಕಚೇರಿ ಆವರಣದಲ್ಲಿ ಮುಖ್ಯಾಧಿಕಾರಿ ಖಾಜಾ ಮೈನುದ್ದೀನ್ ಸದಸ್ಯರುಗಳಿಗೆ, ಸಿಬ್ಬಂದಿಗಳಿಗೆ ಮತ್ತು ಕಚೇರಿಗೆ ಆಗಮಿಸಿದ್ದ ನಾಗರಿಕರಿಗೆ ಮಾನವ ಹಕ್ಕುಗಳ ಕುರಿತ ಪ್ರತಿಜ್ಞಾವಿಧಿಯನ್ನು ಬೋಧಿಸಿದರು.

### ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ



● ವಾರ್ತಾಲೋಕ ವಾರ್ತೆ

**ಮರಿಯಮ್ಮನಹಳ್ಳಿ ಡಿ. 10:** ಪಟ್ಟಣದ 1ನೇ ವಾರ್ಡಿನ ಯುವಕರ ತಂಡ ಕಾರ್ಗಿಲ್ ಟೀಮ್ ವತಿಯಿಂದ ಕ್ರಿಕೆಟ್ ಪಂದ್ಯಾವಳಿಗಳನ್ನು ಆಯೋಜಿಸಿದ್ದರು.

ಪಟ್ಟಣದ ಹೊರವಲಯದ ವೆಂಕಟಾಪುರ ರಸ್ತೆಯ ಸಮೀಪವಿರುವ ಜಮೀನಿನಲ್ಲಿ ಆಯೋಜಿಸಲಾಗಿದೆ.

ಎಲ್. ಬಿ. ಮಂಜುನಾಥ, ಹಲಗಿ ರಾಘವೇಂದ್ರ, ದುರುಗಪ್ಪ, ಸ್ವಾಮಿ ಆಯೋಜಕರ ತಂಡ ಪಂದ್ಯಾವಳಿಗಳನ್ನು ಆಯೋಜಿಸಲಾಗಿದ್ದು . ಈ ಕ್ರೀಡಾಕೂಟದಲ್ಲಿ ಸುತ್ತ ಮುತ್ತಲಿನ ಗ್ರಾಮಗಳಿಂದ 20ತಂಡಗಳಿಂದ 220ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. 6ದಿನಗಳ ಕಾಲ ಈ ಪಂದ್ಯಾವಳಿ ನಡೆಯಲಿವೆ. ವಿಜೇತರಿಗೆ ಮೊದಲನೇ ಬಹುಮಾನ 30,000ಸಾವಿರ ಮತ್ತು ಟ್ರೋಫಿ, ಎರಡನೇ ಬಹುಮಾನ 20,000ಸಾವಿರ ಮತ್ತು ಟ್ರೋಫಿ ಕೊಡಲಾಗುವುದು ಎಂದು ಆಯೋಜಕರಾದ ಎಲ್. ಬಿ. ಮಂಜುನಾಥ ತಿಳಿಸಿದರು.

ಮಂಜುನಾಥ ಲಕ್ಕಿಮರ ಕ್ರಿಕೆಟ್ ಕ್ರೀಡಾಕುಟಕ್ಕೆ ಮೊದಲನೇ ಪಂದ್ಯಕ್ಕೆ ಟಾಸ್ ಹಾಕಿ ಬ್ಯಾಟಿಂಗ್ ಮಾಡುವುದರ ಮೂಲಕ ಚಾಲನೆ ನೀಡಿದರು.

## ಗ್ರಂಥಾಲಯದಿಂದ ಜ್ಞಾನದ ವಿಕಾಸ: ಡಾ. ಜಿ.ಸಿ. ಕಂಠಿ



**ವಿಜಯಪುರ** : ದೇಶ ಸುತ್ತು ಕೋಶ ಓದು ಎಂಬ ಜಾಣ್ನುಡಿಯಂತೆ ಪ್ರಪಂಚ ಸುತ್ತಿ, ಗ್ರಂಥಗಳನ್ನು ಓದಿದರೆ ಅಪಾರ ಜ್ಞಾನ ಪ್ರಾಪ್ತವಾಗುವುದು. ಗ್ರಂಥಾಲಯಗಳು ಜ್ಞಾನದ ಖನಿಜಗಳಿದ್ದಂತೆ, ಅವುಗಳ ಬಳಕೆಯಿಂದ ಮನುಷ್ಯ ಮಹಾಮಾನವನಾಗಿ ರೂಪಗೊಳ್ಳುತ್ತಾನೆ. ಆದ್ದರಿಂದ ಪ್ರತಿಯೊಬ್ಬರು ಓದುವುದನ್ನು ರೂಢಿಸಿಕೊಳ್ಳಬೇಕೆಂದು ಡಾ. ಜಿ.ಸಿ. ಕಂಠಿ ಅವರು ಹೇಳಿದರು.

ಜಾನಪದ ಸಾಹಿತಿ ಡಾ. ಎಂ.ಎನ್. ವಾಲಿ ಅವರು ಸಂಗ್ರಹಿಸಿದ ಗ್ರಂಥಾಲಯವನ್ನು ಉದ್ಘಾಟಿಸಿ ಮಾತನಾಡಿದರು.

ವಾಲಿ ಕುಟುಂಬದವರು ಆಯೋಜಿಸಿದ್ದ ಸಮಾರಂಭದ ಅಧ್ಯಕ್ಷತೆಯನ್ನು ಹಿರಿಯರಾದ ವಿ.ಸಿ. ನಾಗಠಾಣ ಅವರು ವಹಿಸಿದ್ದರು.

ಡಾ. ಸೋಮಶೇಖರ ವಾಲಿ ಅವರು ವಯೋವೃದ್ಧ ಡಾ. ಎಂ.ಎನ್. ವಾಲಿ ಅವರ ಜೀವನ ಸಾಧನೆಯನ್ನು ಕುರಿತು ಮಾತನಾಡಿದರು.

ಜಂಬುನಾಥ ಕಂಚ್ಯಾಣಿ, ಡಾ. ಮಲ್ಲಿಕಾರ್ಜುನ ಮೇತ್ರಿ, ಬಿ.ಎಚ್. ಬಾದರಬಂಡಿ, ಕಾಶಿನಾಥ ಅಣೆಪ್ಪನವರ ಹಾಗೂ ಗಜಾಕೋಶ ಅವರು ವಾಲಿಯವರೊಡನೆ ಹೊಂದಿದ್ದ ಒಡನಾಟ ಮತ್ತು ಅವರ ವ್ಯಕ್ತಿತ್ವದ ವಿವಿಧ ಮಗ್ಗಲುಗಳ ಕುರಿತು ಸಂತೋಷ ಹಂಚಿಕೊಂಡರು.

ತೊಂಬತ್ತರ ವಯೋವೃದ್ಧ ಡಾ. ಎಂ.ಎನ್. ವಾಲಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಮ.ಗು. ಯಾದವಾಡ ಸ್ವಾಗತಿಸಿದರು. ಬಮ್ಮಣ್ಣಿ ಪ್ರಾರ್ಥಿಸಿದರು.

ಡಾ. ಅಶೋಕ ವಾಲಿ ವಂದಿಸಿದರು. ಕಾರ್ಯಕ್ರಮದಲ್ಲಿ ಎಸ್.ಜಿ. ನಾಡಗೌಡರ, ವಿಠ್ಠಲ ತೇಲಿ, ಡಿ.ಎಸ್. ಪಾಟೀಲ, ಈರಣ್ಣ ತೊಂಡಿಕಟ್ಟಿ, ಪರಶುರಾಮ ಪೋಳ, ಅಮರೇಶ ಸಾಲಕ್ಕಿ, ಬಿ.ಎಂ. ಪಾಟೀಲ, ಶಿವರುದ್ರಪ್ಪ ಪಟ್ಟಣಶೆಟ್ಟಿ, ವಾಲಿ ಕುಟುಂಬದ ಬಂಧು ಮಿತ್ರರು ಉಪಸ್ಥಿತರಿದ್ದರು.

# ವೀರಭದ್ರೇಶ್ವರ, ಭದ್ರಕಾಳಿ ಅಮ್ಮನವರ ಬೆಳ್ಳಿ ರಥ ಎಳೆದು ಭಕ್ತಿ ಸಮರ್ಪಿಸಿದ ಮಹಿಳೆಯರು

**ಸಿಂದಗಿ** : ಪಟ್ಟಣದಲ್ಲಿ ಮಂಗಳವಾರ ವೀರಭದ್ರದೇವರು ಹಾಗೂ ಭದ್ರಕಾಳಿ ಅಮ್ಮನವರ ಬೆಳ್ಳಿ ರಥಕ್ಕೆ ಸಾರಂಗಮಠದ ಡಾ.ಪ್ರಭುಸಾರಂಗದೇವ ಆದಿಯಾಗಿ ತಾಲೂಕಿನ ವಿವಿಧ ಮಠಾಧೀಶರು ಚಾಲನೆ ನೀಡಿದರು.

ವೀರಭದ್ರದೇವರು ಹಾಗೂ ಭದ್ರಕಾಳಿ ಅಮ್ಮನವರ ಬೆಳ್ಳಿ ರಥವನ್ನು ನೂರಾರು ಮಹಿಳೆಯರು ಎಳೆಯುವುದರ ಮೂಲಕ ತಮ್ಮ ಭಕ್ತಿ ಸಮರ್ಪಿಸಿದರು. ಉತ್ತರ ಕರ್ನಾಟಕದಲ್ಲಿಯೆ ಅತ್ಯಂತ ವಿಶೇಷವಾಗಿ ಮಹಿಳೆಯರೆ ರಥವನ್ನು ಎಳೆಯುವುದು ವಿಶೇಷವಾಗಿದೆ.

ಸಾರಂಗಮಠದ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು, ಇಲ್ಲಿನ ವೀರಭದ್ರೇಶ್ವರ ಹಾಗೂ ಭದ್ರಕಾಳಿ ಅಮ್ಮನವರ ಭಕ್ತರ ಇಚ್ಚೇಷ್ಟೇಗಳ ಈಡೇರಿಕೆಗಾಗಿ ಕಳೆದ ಆರು ವರ್ಷಗಳಿಂದ ಮಹಿಳೆಯರೇ ಈ ರಥವನ್ನು ಎಳೆಯುವ ಸಂಪ್ರದಾಯಕ್ಕೆ ವಿಶೇಷ ಮನ್ನಣೆ ಕೊಟ್ಟಿರುವುದು ಇತಿಹಾಸ. ರಥದ ಬೆಳ್ಳಿ ಪೀಠದಲ್ಲಿ ರಾರಾಜಿಸುತ್ತಿದ್ದ ವೀರಭದ್ರದೇವರು ಮತ್ತು ಭದ್ರಕಾಳಿ ಅಮ್ಮನವರ ಉತ್ಸವ



ಮೂರ್ತಿಗಳೊಂದಿಗೆ ಸಾಗಿದ ರಥ ಮತ್ತು ಬೆಳ್ಳಿ ಪಲ್ಲಕ್ಕಿ, ನಗರದ ಸಾರಂಗಮಠದಿಂದ ಆರಂಭಗೊಂಡು, ಸ್ವಾಮಿ ವಿವೇಕಾನಂದ ವೃತ್ತ, ತೋಂಟದ ಡಾ.ಸಿದ್ಧಲಿಂಗ ಮಹಾಸ್ವಾಮಿಗಳ ರಸ್ತೆ ಮಾರ್ಗವಾಗಿ, ಕಾಯಿಪಲ್ಲೆ ಮಾರ್ಕೆಟ್ ಬಳಿ ಇರುವ ಗಚ್ಚಿನಮಠದ ಚೆನ್ನವೀರ ಸ್ವಾಮೀಜಿ ಪ್ರೌಢಶಾಲೆಯ ಅವರಣದಲ್ಲಿರುವ ವೀರಭದ್ರೇಶ್ವರ ಹಾಗೂ ಭದ್ರಕಾಳಿ ಅಮ್ಮನವರ ದೇವಸ್ಥಾನಕ್ಕೆ ತೆರಳಿತು.

ನಗರದುದ್ದಕ್ಕೂ ಉಡಪಿಯ ಸ್ಕಂದ ಚೆಂಡೆ ಬಳಗದವರಿಂದ ನಡೆದ ಕುಣಿತ ಜನಮನ ಸೆಳೆಯಿತು. ಪುರವಂತಿಕೆ, ಜಯ ಘೋಷಗಳೊಂದಿಗೆ ಬೆಳ್ಳಿ ರಥ ಹಾಗೂ ಪಲ್ಲಕ್ಕಿ ವಿಜೃಂಭಣೆಯಿಂದ ನಡೆಯಿತು.

ನಂತರ ದೇವಸ್ಥಾನದ ಬೆಳ್ಳಿ ಪಲ್ಲಕ್ಕಿಯೊಂದಿಗೆ ಅಗ್ನಿ ಪ್ರವೇಶ ಮಾಡಲಾಯಿತು. ರಥೋತ್ಸವದಲ್ಲಿ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು, ಕೊಣ್ಣೂರಿನ ಹೊರಗಿನಮಠದ ಡಾ.ವಿಶ್ವಪ್ರಭುದೇವ ಶಿವಾಚಾರ್ಯರು, ಪಾಳ ಮಠದ ಡಾ.ಗುರುಮೂರ್ತಿ ಶಿವಾಚಾರ್ಯರು, ಯಂಕಂಚಿ ಹಿರೇಮಠದ ಅಭಿನವ ರುದ್ರಮನಿ ಶಿವಾಚಾರ್ಯರು, ಕನ್ನೊಳ್ಳಿ ಹಿರೇಮಠದ ಸಿದ್ಧಲಿಂಗ ಶಿವಾಚಾರ್ಯರು, ಕಲಕೇರಿ ಪಂಚರಂಗ ಸಂಸ್ಥಾನಮಠದ ಮಡಿವಾಳೇಶ್ವರ ಶಿವಾಚಾರ್ಯರು, ಶಾಸಕ ಅಶೋಕ ಮನಗೂಳಿ ಸೇರಿದಂತೆ ತಾಲೂಕಿನ ವಿವಿಧ ಮಠದ ಶ್ರೀಗಳು, ಪುರಸಭೆ ಅಧ್ಯಕ್ಷ ಶಾಂತವೀರ ಬಿರಾದಾರ, ಅಶೋಕ ವಾರದ, ಸೋಮನಗೌಡ ಬಿರಾದಾರ, ದಯಾನಂದಗೌಡ ಬಿರಾದಾರ, ರವಿ ಗೋಲಾ, ಎಸ್.ಎಂ ಬಿರಾದಾರ, ಡಾ.ಶರಣಬಸವ ಜೋಗುರ, ಚನ್ನು ಕತ್ತಿ, ವಿರೇಶ ಜೋಗುರ, ಶಿವಕುಮಾರ ಜೋಗುರ, ಮುತ್ತು ಮುಂಡೇವಾಡಗಿ, ಶ್ರೀಶೈಲ ನಂದಿಕೋಲ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರು, ಸಂಸ್ಥೆಯ ಅಂಗ ಸಂಸ್ಥೆಗಳ ಪ್ರಾಚಾರ್ಯರು, ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳು ಹಾಗೂ ಮಹಿಳಾ ಭಕ್ತ ವರ್ಗ, ತಾಲೂಕಿನ ಶ್ರೀಮಠದ ಭಕ್ತರು ಜಿ.ಪಿ.ಪೊ?ರವಾಲ್ ಮತ್ತು ಆರ್.ಡಿ. ಪಾಟೀಲ ಕಾಲೇಜಿನ ಎನ್.ಸಿ.ಸಿ, ಎನ್ಎಸ್ಎಸ್ ಹಾಗೂ ಸ್ಕೌಟ್ಸ್ ಮತ್ತರು ಗೈಡ್ಸ್ ವಿದ್ಯಾರ್ಥಿಗಳು ಇದ್ದರು.

## ಶಾಸಕ ಯತ್ನಾಳ ಕ್ಷಮೆ ಕೇಳಬೇಕು: ಎಂ.ಸಿ. ಮುಲ್ಲಾ



**ವಿಜಯಪುರ** : ಬುದ್ಧಿಜೀವಿಗಳು, ರಾಜಕಾರಣಿಗಳ ಕುರಿತು ಟೀಕೆ ಮಾಡುತ್ತಿದ್ದ ಶಾಸಕ ಬಸನಗೌಡ ಪಾಟೀಲ ಯತ್ನಾಳ, ವಿಶ್ವಗುರು ಅಣ್ಣ ಬಸವಣ್ಣನರ ಬಗ್ಗೆ ಮಾತನಾಡಿರುವುದು ಖಂಡನೀಯ. ಅವರು ಕೂಡಲೇ ಕ್ಷಮೆ ಕೇಳಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ ಎಂಯ ಉಪಾಧ್ಯಕ್ಷ ಎಂ.ಸಿ. ಮುಲ್ಲಾ ಒತ್ತಾಯಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತಿತ್ತಲಾಗಿ ಯತ್ನಾಳರ ತಲೆ ಕೆಟ್ಟಿದೆ ಅಂತಾ ಅನ್ನಿಸುತ್ತಿದೆ. ಇಡೀ ವಿಶ್ವಕ್ಕೆ, ಇಡೀ ಮಾನವ ಕುಲಕ್ಕೆ ಬಸವಣ್ಣನವರ ಆದರ್ಶ, ತತ್ವಗಳು ಮಾದರಿಯಾಗಿವೆ. ಅಂತಹ ಬಸವಣ್ಣನವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಹೇಳುವುದು ಸರಿಯಲ್ಲ ಎಂದರು.

ವೀರಶೈವ ಎಲ್ಲ ನಾಯಕರು ಆಗಲಿ, ಸಾಹಿತಿಗಳು ಸೇರಿದಂತೆ ಅನೇಕರು ಈ ವಿಷಯ ಖಂಡಿಸಿದ್ದಾರೆ. ಈ ರೀತಿ ಹೇಳಿಕೆ ನೀಡಿರುವುದು ಮಾರಕವಾಗಿದೆ. ಯತ್ನಾಳ ಅವರು ರಾಜಕೀಯವಾಗಿ ಹೇಳಿಕೆ ಕೊಡಲಿ, ತಾವು ರಾಜಕೀಯ ಸ್ಥಾನಕ್ಕಾಗಿ ಓಡಾಡಲಿ, ಆದರೆ ಮಹಾಪುರುಷರ ಬಗ್ಗೆ ಇಲ್ಲಸಲ್ಲದ್ದನ್ನು ಮಾತನಾಡುವುದು ಸರಿಯಲ್ಲ ಎಂದು ದೂರಿದರು.

ಮುಖಂಡರಾದ ದಯಾನಂದ ಸಾವಳಗಿ, ಮಹಾದೇವ ರಾವಜಿ, ಫಯಾಜ್ ಕಲಾದಗಿ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

# ಅತೀ ಚಿಕ್ಕ ವಯಸ್ಸಿನ ಪೈಲೆಟ್ ಸಾಧಕಿಯ ತಂದೆ ತಾಯಿಗೆ ಸನ್ಮಾನ

**ವಿಜಯಪುರ:** ಇಡೀ ದೇಶದಲ್ಲಿಯೇ ಅತ್ಯಂತ ಅಚ್ಚರಿ ಮತ್ತು ಅದ್ಭುತ ಸಾಧನೆ ಮಾಡಿ ಇಡೀ ಕರ್ನಾಟಕಕ್ಕೆ ಹೆಸರು ತಂದು ವಿಜಯಪುರದ ಕೀರ್ತಿ ಹೆಚ್ಚಿಸಿದ ಅತ್ಯಂತ ಕಿರಿಯ ವಯಸ್ಸಿನ ಸಾಧಕಿ ಎಂದೇ ಪ್ರಖ್ಯಾತಿಯಾದ ಕುವಾರಿ ಸಮೈರಾ ಅಮೀನ್ ಹಲ್ಲೂರ ಅವರ ಸಾಧನೆಗೆ ಹರ್ಷಿತಗೊಂಡ ವಿಜಯಪುರದ ಭೃಂಗಿಮಠ ಕ್ರಿಯಾತ್ಮಕ ವೇದಿಕೆಯು ಅವಳ ತಂದೆ–ತಾಯಿಗೆ ಸನ್ಮಾನಿಸಿ ಗೌರವಿಸಿದರು.

ಈ ಸಂಧರ್ಭದಲ್ಲಿ ಸಾಧಕಿಯ ತಂದೆಯಾದ ಅಮೀನ್ ಹಲ್ಲೂರ ಅವರು ಮಾತನಾಡಿ, ಮಕ್ಕಳ ಸಾಧನೆಯಿಂದಾಗಿ ಇಂತಹ ಸಾಧಕಿಯರ ತಂದೆ ಎಂದು ಗುರುತಿಸುವಂತಾಗಿದೆ, ಇದು ನನಗೆ ಹೆಮ್ಮೆಯ ಸಂಗತಿಯಾಗಿದೆ ಎಂದರು.

ಈ ಸಂಧರ್ಭದಲ್ಲಿ ಕವಿಪೀಠ ಜನಕ ಮಲ್ಲಿಕಾರ್ಜುನ ಭೃಂಗಿಮಠ ಅವರು ಮಾತನಾಡಿ,

ಮಕ್ಕಳಲ್ಲಿರುವ ಪ್ರತಿಭೆಯನ್ನು ತಡಮಾಡದೇ ಗುರುತಿಸಿ ,ಆ



ನಿಟ್ಟಿನತ್ತ ತಂದೆ ತಾಯಿ ಶ್ರಮಿಸಬೇಕು. ಅಲ್ಲದೇ ಪಾಲಕರು,ವಿದ್ಯಾಲಯಗಳ ಶಿಕ್ಷಕರು,ಮಕ್ಕಳಲ್ಲಿ ಅಡಗಿರುವ ಪ್ರತಿಭೆ ಹೊರತರಲು ಶ್ರಮಿಸಿದಾಗ ಮಾತ್ರ ಇಂತಹ ಸಾಧನೆಯ ಶಿಖರ ಏರಲು ಸಾಧ್ಯವಾಗುತ್ತದೆ ಎಂದರು.

ನ್ಯಾಯವಾದಿ ಶಾಂತೇಶ ಜಾಲಗೇರಿ ಅವರು ಮಾತನಾಡಿ, ಇಂತಹ ಸಾಧನೆ ಮಾಡಿದ ಯುವತಿ ಕರ್ನಾಟಕದವಳಾಗಿದ್ದು , ಅದು ವಿಶೇಷವಾಗಿ ವಿಜಯಪುರ ಜಿಲ್ಲೆಯವಳಾಗಿರವುದು ನಮಗೆ ಹೆಮ್ಮೆ ಇದೆ. ಇಂತಹ ಸಾಧನೆ ಮಾಡಿದ ಇತಿಹಾಸ ಮಹಾನಗರ ವಿಜಯಪುರದ ಮತ್ತು ರಾಜ್ಯದ ,ದೇಶದ ಜನ ಇವಳ ಸಾಧನೆಯಿಂದ ಬಹಳ ಖುಷಿಯಾಗಿದ್ದಾರೆ. ಈ ಯುವತಿ ಇತರರಿಗೆ ಮಾದರಿ ಎಂದರು.

ವೀರಣ್ಣ ಓಕಳಿ ಕಲಬುರಗಿ ಅವರು ಮಾತನಾಡಿ, ಮಕ್ಕಳ ಸಾಧನೆಯಲ್ಲಿ ತಂದೆ– ತಾಯಿ,_ಅಜ್ಜ,ಅಜ್ಜಿ ಪಾತ್ರಬಹು ಮುಖ್ಯವಾಗಿರುತ್ತದೆ ಎಂದರು.

ವಕೀಲರಾದ ಅಜಯಕುಮಾರ ಜುಮ್ಮನವರ ಅವರು ಮಾತನಾಡಿ, ವಿಜಯಪುರದ ಕುಮಾರಿಯ ಸಾಧನೆಗೆ ಇಡೀ ದೇಶವೇ ಹೆಮ್ಮೆ ಪಡುವಂತಾಗಿದೆ. ಇಂತಹ ಸಾಧಕರು ವಿವಿಧ ಕ್ಷೇತ್ರಗಳಲ್ಲಿ ಅತ್ಯಗತ್ಯ ಎಂದರು.

ಫಕೀರಸಾಬ ಬಾಗವಾನ ಜಮಖಂಡಿ, ಮುಬಾರಕ ವಾಲಿಕಾರ, ಅಜಯ ಕುಮಾರ ಜುಮ್ಮನವರ ಮುಂತಾದವರು ಮಾತನಾಡಿ, ಸಾಧನೆಗೆ ಪ್ರಶಂಸಿಸಿದರು. ವಾಲಕಾರ ವಂದಿಸಿದರು.




# ಮಕ್ಕಳ ಹಕ್ಕುಗಳ ಕುರಿತು ಹಿರೇವಂಕಲಕುಂಟಾ ವಸತಿ ಶಾಲೆಯಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ

**ಕೊಪ್ಪಳ :** ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ ಇವರ ಸಹಯೋಗದಲ್ಲಿ "ಮಕ್ಕಳ ಹಕ್ಕುಗಳು ಕಾಯ್ದೆಗಳು ಹಾಗೂ ಸಮಸ್ಯೆಗಳ ಕುರಿತು ಮಕ್ಕಳೊಂದಿಗೆ ಸಂವಾದ ಕಾರ್ಯಕ್ರಮ"ವು ಶುಕ್ರವಾರದಂದು ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಹಿರೇವಂಕಲಕುಂಟಾ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ನಡೆಯಿತು.

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ಜಿ ರಾಮತ್ನಾಳ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು ಬಳಿಕ ಮಾತನಾಡಿ, ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಭಾರತ ಸರಕಾರವು ಒಪ್ಪಿ 11 ಡಿಸೆಂಬರ್ 1992 ಸಹಿ ಮಾಡಿರುತ್ತದೆ. 18 ವರ್ಷದೊಳಗಿನ ಎಲ್ಲಾ ಮಾನವ ಜೀವಿಗಳು ಸಹಮಕ್ಕಳುಎಂದುಪರಿಗಣಿತವಾಗಿರುತ್ತದೆ. ದೇಶದ ಸಮಸ್ತ ಮಕ್ಕಳಿಗೂ ಬದುಕುವ ಹಕ್ಕುಗಳು, ಅಭಿವೃದ್ಧಿ ಮತ್ತು ವಿಕಾಸ ಹೊಂದುವ ಹಕ್ಕುಗಳು, ಶೋಷಣೆಯ ವಿರುದ್ಧ ಸಂರಕ್ಷಣೆಯ ಹಕ್ಕುಗಳು ಹಾಗೂ ಭಾಗವಹಿಸುವ ಹಕ್ಕುಗಳನ್ನು ಅನುಭವಿಸುವಂತಹ ವಾತಾವರಣ ನಿರ್ಮಿಸಬೇಕಿದೆ ಈ ಉದ್ದೇಶಗಳ ಸಾಧನೆಗಾಗಿ ಭಾರತ ಸರಕಾರವು ಹಲವಾರು ಕಾಯ್ದೆ ಮತ್ತು ಯೋಜನೆಗಳನ್ನು ಜಾರಿಗೆ



ತಂದಿದೆ ಎಂದು ಹೇಳಿದರು.

ಕಾಯ್ದೆ ಮತ್ತು ಯೋಜನೆಗಳ ಮೇಲ್ವಿಚಾರಣೆ ಮತ್ತು ಉಸ್ತುವಾರಿಗಾಗಿ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಕಾಯ್ದೆ-2005ರನ್ವಯ ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಕ್ರಮವಾಗಿ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಗಳನ್ನು ರಚಿಸಿ, ಜಾರಿಯಲ್ಲಿ ತಂದಿರುತ್ತದೆ. ರಾಜ್ಯದಲ್ಲಿ ಆಯೋಗವು ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆ-2009, ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ-2012, ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ-2015ಯನ್ನು ಮೇಲುಸ್ತುವಾರಿ ಮಾಡುವ ಅಧಿಕಾರವನ್ನು ಹೊಂದಿದೆ. ಮಕ್ಕಳ ಹಕ್ಕುಗಳ ಉಲ್ಲಂಘನೆಯಾದಲ್ಲಿ ಯಾರೇ ಆದರೂ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು, ದೂರವಾಣಿ ಸಂಖ್ಯೆ 080-22115290/92 ಅಥವಾ www.kscpcr.karnataka.gov.inನಲ್ಲಿ ದೂರನ್ನು ನೀಡಬಹುದಾಗಿದೆ ರಾಜ್ಯದಲ್ಲಿ ವಿನೂತನವಾಗಿ ಮಕ್ಕಳ ಸಮಸ್ಯೆಗಳನ್ನು ಅರಿತು ಪರಿಹಾರಗಳನ್ನು ಕಂಡುಕೊಳ್ಳಲು "ಮಕ್ಕಳೊಂದಿಗೆ ಸಂವಾದ ಕಾರ್ಯಕ್ರಮ" ಎಂಬ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಹಾಂತಸ್ವಾಮಿ ಪೂಜಾರ ಅವರು ಮಾತನಾಡಿ, ಮಕ್ಕಳ ಮೇಲಿನ ಲೈಂಗಿಕ ಅಪರಾಧಗಳನ್ನು ತಡೆಗಟ್ಟಲು ಸರಕಾರವು "ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ-2012ನು ಜಾರಿಯಲ್ಲಿ ತಂದಿದೆ, ಅಲ್ಲದೇ ಈ ಕಾಯ್ದೆಗೆ 2019ರಲ್ಲಿ ತಿದ್ದುಪಡಿಯನ್ನನು ತಂದಿರುತ್ತದೆ. ಈ ಕಾಯ್ದೆಯನ್ವಯ ಅಪ್ರಾಪ್ತ ವಯಸ್ಸಿನ ಮಕ್ಕಳ ಮೇಲೆ ಲೈಂಗಿಕ ಅಪರಾಧಗಳನ್ನು ಎಸಗಿದ ವ್ಯಕ್ತಿಗೆ ಕನಿಷ್ಠ 20 ವರ್ಷದಿಂದ ಜೀವಾವಧಿ ಜೈಲು ಶಿಕ್ಷೆ ಮತ್ತು ದಂಡವನ್ನು ಅಥವಾ ಮರಣ ದಂಡನೆಯನ್ನು ವಿಧಿಸಬಹುದಾಗಿದೆ. ಅಪ್ರಾಪ್ತ ವಯಸ್ಸಿನ ಪತ್ನಿಯೊಂದಿಗಿನ ಲೈಂಗಿಕ ಸಂಪರ್ಕವು ಸಹ ಅಪರಾಧವಾಗಿದೆ. ಈ ರೀತಿಯ ಘಟನೆಗಳು ಈಗಾಗಲೇ ಜಿಲ್ಲೆಯಲ್ಲಿ ಬಹಳಷ್ಟು ವರದಿಯಾಗಿದ್ದು, ಪ್ರಕರಣಗಳು ದಾಖಲಾಗಿವೆ ಆದ್ದರಿಂದ ತಮ್ಮ ವ್ಯಾಪಿಯಲ್ಲಿ ಈ ಕುರಿತು ವ್ಯಾಪಕ ಪ್ರಚಾರವನ್ನು ನೀಡಿ ಎಂದು ತಿಳಿಸಿದರು.

ವಿದ್ಯಾಥಿಗಳೊಂದಿಗೆ ಸಂವಾದ: ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿವಿಧ ಗ್ರಾಮಗಳ ವಿದ್ಯಾರ್ಥಿಗಳು, ನಮ್ಮ ಗ್ರಾಮಕ್ಕೆ ಕಾಲೇಜಿನ ಸಮಯಕ್ಕೆ ಸರಿಯಾಗಿ ಬಸ್‌ನ್ನು ಬಿಡುವಂತೆ ವಿನಂತಿಸಿದರು, ಅದಕ್ಕೆ ವ್ಯವಸ್ಥಾಪಕರು, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ವಿಭಾಗ ಯಲಬುರ್ಗಾರವರು ಬಸ್‌ಗಳ ಸಮಯವನ್ನು ಮರು ನಿಗದಿಗೊಳಿಸಲಾಗುವುದೆಂದು ತಿಳಿಸಿದರು. ಇದೇ ಕಾಲೇಜಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸುವಂತೆ ವಿದ್ಯಾರ್ಥಿಗಳು ವಿನಂತಿಸಿದರು, ಹಿರೇವಂಕಲಕುಂಟಾ ಗ್ರಾಮ ಪಂಚಾಯತ್ ಅಧ್ಯಕ್ಷರು, ಈಗಾಗಲೇ ಎರಡು ನೀರಿನ ಬಾಟಲಗಳನ್ನು ಪೂರೈಸುತ್ತಿದ್ದು, ಇದನ್ನು 10 ಬಾಟಲ್‌ಗೆ ಹೆಚ್ಚಿಸಲಾಗುವುದೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ ಅಧ್ಯಕ್ಷೆ ಹುಲಿಗೆಮ್ಮ ಬಸಪ್ಪ ಜರ್ಲಿ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ಪ್ರಕಾಶ ಕಡಗದ, ಯಲಬುರ್ಗಾ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬೆಟದಪ್ಪ ಮಾಳೇಕೊಪ್ಪ, ಶಶಿಧರ ಸಕ್ರಿ, ರಮೇಶ ಜೇಣಗಿ, ನಿವೇದಿತಾ ಡಿ, ಮಹಾಂತೇಶ ತಮ್ಮಣ್ಣವರು, ರವಿ ಢಣಾಪುರ, ಅಮರೇಶ ಹಿರೇಮಠ, ಹನುಮೇಶ ಕುರಿ, ಶಿವಲೀಲಾ ವನ್ನೂರು ಸೇರಿದಂತೆ ಇತರರು ಇದ್ದರು.

ರವಿಕುಮಾರ ಪವಾರ ಕಾರ್ಯಕ್ರಮವನ್ನು ಸ್ವಾಗತಿಸಿದರು, ಪ್ರತಿಭಾ ಕಾಶಿಮಠ ನಿರೂಪಿಸಿದರು ರವಿಕುಮಾರ ಬಡಿಗೇರ ವಂದಿಸಿದರು.

# ಬಹುಮುಖ ಪ್ರತಿಭೆ ತ್ರಿಷಿಕಾ ಎಂಬ ಪುಟ್ಟ ಬಾಲಕಿಗೆ ಡಾ. ಬೇಗಾರರಿಂದ ಸನ್ಮಾನ




**ಕೊಪ್ಪಳ :** ಬಹುಮುಖ ವಸ್ತುಗಳನ್ನು ಗುರುತಿಸುವಪ್ರತಿಭೆಯುಳ್ಳಸುಮಾರು ಒಂದುವರೆ ವರ್ಷದ ಬಾಲಕಿಯಾದ ತ್ರಿಷಿಕಾ ವೀರೇಶ್ ಹಡಗಲಿ ಕರ್ನಾಟಕ ಅಚೀವರ್ಸ್ ಬುಕ್ ಆಫ್ ರೆಕಾರ್ಡ್ ಪ್ರಶಸ್ತಿ ಪತ್ರ ಪಡೆದು ದಾಖಲೆ ನಿರ್ಮಿಸಿದ್ದಾರೆ ಸದರಿ ಪುಟ್ಟ ಬಾಲಕಿಗೆ ಶನಿವಾರದಂದು ಭಾಗ್ಯನಗರ ದಲ್ಲಿ ಶ್ರೀ ನಾಗರತ್ನ ಶಿಕ್ಷಣ ಸೇವಾ ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಯಾಗಿರುವ ಡಾ.ಅನಿಲ್ ಕುಮಾರ್ ಬೇಗಾರ್ ರವರು ಬಹುಮುಖ ಪ್ರತಿಭೆ ಕಂಡು ಅಪಾರ ಮೆಚ್ಚುಗೆ ವ್ಯಕ್ತಪಡಿಸಿ ತಮ್ಮ ಸಂಸ್ಥೆಯ ಪರವಾಗಿ ಸನ್ಮಾನಿಸಿ ಅಭಿನಂದಿಸಿದರು,

ಸದರಿ ಪುಟ್ಟ ಬಾಲಕಿ ಅವರ ತಂದೆ ಮೂಲತಃ ವಿಜಯನಗರ ಜಿಲ್ಲೆ ಕೊಟ್ಟೂರು ತಾಲೂಕಿನವರಾಗಿದ್ದು ಕುಡತಿನಿಯ ಕರ್ನಾಟಕ ಪವರ್ ಕಾರ್ಪೋರೇಷನ್ ಲಿಮಿಟೆಡ್ ನಲ್ಲಿ ಸಹಾಯಕ ಅಭಿಯಂತರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ, ಇವರ ಮಾವ ನವರಾದ ಗವಿಸಿದ್ದನ ಗೌಡ ಮಾಲಿ ಪಾಟೀಲ್ ರವರ ನಿವಾಸ ಭಾಗ್ಯನಗರದಲ್ಲಿ ಸದರಿ ಪುಟ್ಟ ಬಾಲಕಿ ತ್ರಿಷಿಕಾ ವೀರೇಶ್ ಹಡಗಲಿ ಅವರ ಬಹುಮುಖ ವಸ್ತುಗಳನ್ನು ಗುರುತಿಸುವ ಪ್ರತಿಭೆಗಳನ್ನು ಕಂಡು ಆಶ್ಚರ್ಯ ಮತ್ತು ಸಂತೋಷ ವ್ಯಕ್ತಪಡಿಸಿ ಆ ಬಾಲಕಿಗೆ ಸನ್ಮಾನಿಸಿ ಅಪಾರ ಮೆಚ್ಚುಗೆ ವ್ಯಕ್ತಪಡಿಸಿ ಮುಂಬರುವ ದಿನಗಳಲ್ಲಿ ಈ ಬಾಲಕಿ ಇನ್ನಷ್ಟು ದಾಖಲೆ ನಿರ್ಮಾಣ ಮಾಡಲಿ ಎಂದು ಡಾ.ಅನಿಲ್ ಕುಮಾರ್ ಬೇಗಾರ ಅವರು ಶುಭ ಹಾರೈಸಿದ್ದಾರೆ, ಈ ಸಂದರ್ಭದಲ್ಲಿ ಪುಟ್ಟ ಬಾಲಕಿ ತ್ರಿಷಿಕಾ ರವರ ತಂದೆ ವೀರೇಶ್ ಹಡಗಲಿ ಮತ್ತು ತಾಯಿ ಮಧುಶ್ರೀ ಹಡಗಲಿ ಯವರು ಉಪಸ್ಥಿತರಿದ್ದರು.

# ಹುಲಿಗಿ ಗ್ರಾಮದಲ್ಲಿ ಟಿಬಿ ಮುಕ್ತ ಭಾರತ ಅಭಿಯಾನಕ್ಕೆ ಚಾಲನೆ




**ಕೊಪ್ಪಳ :** ತಾಲೂಕಿನ ಹುಲಿಗಿ ಗ್ರಾಮ ದಲ್ಲಿ ಶನಿವಾರ ಬೆಳಿಗ್ಗೆ ಟಿ ಬೀ ಮುಕ್ತ ಭಾರತಕ್ಕಾಗಿ 100 ದಿನಗಳ ಅಭಿಯಾನ ಹಮ್ಮಿಕೊಳ್ಳಲಾಯಿತು ಬರುವ 2025ರ ಡಿಸೆಂಬರ್ ಅಂತ್ಯದ ವರೆಗೆ ಟಿ ಬೀ ಮುಕ್ತ ಭಾರತ ನಿರ್ಮಾಣಕ್ಕಾಗಿ ಶ್ರಮಿಸೋಣ, ಕ್ಷಯರೋಗದ ಬಗ್ಗೆ ಭಯ ಪಡೆಯುವ ಅಗತ್ಯವಿಲ್ಲ, ಮುಂಜಾಗ್ರತೆ ವಹಿಸುವುದು ಮುಖ್ಯ, ದೇಶ ರಿಜೇತೆಗಾ,

ಟಿಬಿ ಹಾರೇಗಾ ಎಂಬ ಜಯ ಘೋಷಣೆ ಕೂಗಿ ಕ್ಷಯರೋಗದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಅಭಿಯಾನ ಹುಲಿಗಿ ಗ್ರಾಮದಲ್ಲಿ ಯಶಸ್ವಿಯಾಗಿ ಜರುಗಿತು,

ಸದರಿ ಅಭಿಯಾನದಲ್ಲಿ ಹುಲಿಗಿ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಶಫಿವುಲ್ಲಾ, ತಾಲೂಕ ವೈದ್ಯಾಧಿಕಾರಿ ಡಾ. ರಾಮಾಂಜನೇಯ ಹುಲಿಗಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಧ ನೀಲಮ್ಮ ಗುಂಗಾಡಿ, ನೀರು ಮತ್ತು ನೈರ್ಮಲ್ಯ ಸಮಿತಿ ಅಧ್ಯಕ್ಷ ರಮೇಶ್ ಸೇರಿದಂತೆ ಆರೋಗ್ಯ ಕೇಂದ್ರದ ಸಿಬ್ಬಂದಿ ವರ್ಗದವರು ಅಂಗನವಾಡಿ ಮತ್ತು ಆಶಾ ಕಾರ್ಯಕರ್ತರು ಅಲ್ಲದೆ ಗ್ರಾಮದ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ಅಭಿಯಾನದಲ್ಲಿ ಪಾಲ್ಗೊಂಡಿದ್ದರು.

# ಡಾ. ಬಿ.ಆರ್. ಅಂಬೇಡ್ಕರ್‌ರವರ ಮಹಾ ಪರಿನಿರ್ವಾಣ ದಿನ: ಜಿಲ್ಲಾಡಳಿತದಿಂದ ಪುಷ್ಪನಮನ ಸಲ್ಲಿಕೆ

**ಕೊಪ್ಪಳ :** ಡಾ.ಬಿ.ಆರ್. ಅಂಬೇಡ್ಕರ್ ರವರ ಮಹಾ ಪರಿನಿರ್ವಾಣ ದಿನದ ಅಂಗವಾಗಿ ಕೊಪ್ಪಳ ಜಿಲ್ಲಾಡಳಿತ ವತಿಯಿಂದ ಶುಕ್ರವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ಮಲ್ಲಿಕಾರ್ಜುನ ತೊದಲಬಾಗಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಅಜ್ಜಪ್ಪ ಸೊಗಲದ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಗದೀಶ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಪರುಶುರಾಮ್ ಶೆಟ್ಟಪ್ಪನವರ್, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಸುಧಾಕರ ಮಾನೆ, ಚುನಾವಣಾ ತಹಶಿಲ್ದಾರ ರವಿ ವಸ್ತ್ರದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ್ ಮರಬನಳ್ಳಿ, ಸೇರಿದಂತೆ ಇತರೆ ವಿವಿಧ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.



# ನವನಗರ ಸ.ಪ್ರ.ದ. ಕಾಲೇಜಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ ಮಹಾಪರಿನಿರ್ವಾಣ ದಿನ ಡಾ. ಬಿ.ಆರ್. ಅಂಬೇಡ್ಕರ್ ಚಿಂತನೆಗಳು ಮನುಕುಲಕ್ಕೆ ಆದರ್ಶ

**ಬಾಗಲಕೋಟೆ :** ಭಾರತೀಯ ಪ್ರಜಾಪ್ರಭುತ್ವದ ಮೌಲ್ಯಗಳನ್ನು ವಿಶ್ವಕ್ಕೆ ಪರಿಚಯಿಸಿರುವ ನಮ್ಮ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ ಅವರು ಚಿಂತನೆಗಳು ಇಂದಿನ ಮಾನವ ಕುಲಕ್ಕೆ ಆದರ್ಶವಾಗಿವೆ ಎಂದು ಪ್ರಾಚಾರ್ಯರಾದ ಡಾ.ಅರುಣಕುಮಾರ ಗಾಳಿ ಅವರು ಹೇಳಿದರು.

ಅವರು ಬಾಗಲಕೋಟೆ ನವನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಆವರಣದಲ್ಲಿ ಶುಕ್ರವಾರ ಆಚರಿಸಲಾದ ಡಾ.ಬಿ.ಆರ್.ಅಂಬೇಡ್ಕರ್ ಅವರ ಮಹಾಪರಿನಿರ್ವಾಣ ದಿನ ಕಾರ್ಯಕ್ರಮದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು. ಡಾ.ಅಂಬೇಡ್ಕರ ಅವರು ಸಮಾನತೆ, ಸಾಮರಸ್ಯ ಮತ್ತು ಸಾಮಾಜಿಕ ನ್ಯಾಯಕ್ಕೆ ಅನುಪಮ ಕೊಡುಗೆ ನೀಡಿದ್ದು, ಇವರ ಜೀವನ ಹಾಗೂ ಪರಂಪರೆ ಸರ್ವರಿಗೂ ಆದರ್ಶವಾಗಿದೆ ಎಂದರು.

ಮಹಾಪರಿನಿರ್ವಾಣ ದಿನ ಕಾರ್ಯಕ್ರಮದಲ್ಲಿ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.





**ಛಲವಾದಿ ಮಹಾಸಭಾ (ಕೆ.ಶಿವರಾಂ) ಜಿಲ್ಲಾ ಘಟಕದಿಂದ ಇಂದು ದಿ.6 ರಂದು ನವನಗರದ ಸೆಕ್ಟರ್ ನಂ.45ರಲ್ಲಿ ಇರುವ ಬುದ್ದ ಉದ್ಯಾನವನದಲ್ಲಿ ಮಹಾಪರಿನಿರ್ವಾಣ ದಿನಾಚರಣೆ ಗೌರವದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ವಿವೇಕಾನಂದ ಗರಸಂಗಿ, ಉಪಾಧ್ಯಕ್ಷರಾದ ಸುಭಾಶ್ಚಂದ್ರ ಬದಾಮಿ, ಶ್ರೀಧರ ಚಿಕ್ಕಲಕಿ, ಸುನೀಲ ನಾರಾಯಣಿ, ರಾಮಣ್ಣ ಹಿರೇಮನಿ, ಸಂಗಪ್ಪ ನಾರಾಯಣಿ, ಸಿದ್ದರಾಜ ಸೊನ್ನದ, ಶನಶಪ್ಪ ಬಂಡಿ, ಜಯವಂತ ಗುದಿಗೆನ್ನವರ, ಡಿ.ಎಸ್.ಜೈಭೀಮ ಹಾಗೂ ಇತರರು ಹಾಜರಿದ್ದರು.**

# ಬಿ.ವಿ.ವಿ. ಸಂಘಕ್ಕೆ 10 ಲಕ್ಷ ರೂ. ದೇಣಿಗೆ ನೀಡಿಕೆ



**ಬಾಗಲಕೋಟೆ :** ಬಿ.ವಿ.ವಿ.ಸಂಘದ ವಿಜ್ಞಾನ ಮಹಾವಿದ್ಯಾಲಯದ ಹಳೆ ವಿದ್ಯಾರ್ಥಿಗಳಾದ ಶ್ರೀ ಮಹಾಂತೇಶ ಬಣಕಾರ ಅವರು ದೂರ ಸಂಪರ್ಕ ಇಲಾಖೇಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದು ಮೂಲತ ಬಾಗಲಕೋಟೆಯವರಾದ ಇವರು ಇಂದು ಸಂಘಕ್ಕೆ ಬೇಟಿ ಸಂದರ್ಭದಲ್ಲಿ ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಅವರಗೆ ವಿಜ್ಞಾನ ಮಹಾವಿದ್ಯಾಲಯಕ್ಕಾಗಿ ತಮ್ಮ ಅಲ್ಪ ಸೇವೆಯಂದು 10 ಲಕ್ಷ ರೂಗಳ ದೇಣಿಗೆ ಚೆಕ್ಕನ್ನೂ ನೀಡಿದರು. ಈ ಸಂದರ್ಭದಲ್ಲಿ ಸಂಘದ ಕಾಲೇಜುಗಳ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರು ಬಸವ ಸೂಳಿಬಾವಿ,

ವೈದ್ಯಕೀಯ ಕಾಲೇಜುಗಳ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಸಜ್ಜನ. ಶಾಲಾ ಆಡಳಿತ ಮಂಡಳಿಯ ಕಾರ್ಯಾಧಕ್ಷ ಮಹಾಂತೇಶ ಶೆಟ್ಟರ, ಪದವಿ ಕಾಲೇಜುಗಳ ಪದನಿಮಿತ್ಯ ಕಾರ್ಯದರ್ಶಿಗಳು

ಹಾಗೂ ವಿಜ್ಞಾನ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎಸ್.ಎಮ್.ಗಾಂವಕರ ಸೇರಿದಂತೆ ಅನೇಕರು ಇದ್ದರು.

# ಶ್ರೀ ಎಸ್.ಬಿ ಹೊರಟ್ಟಿ ಸರಕಾರಿ ಕಾಲೇಜು ವತಿಯಿಂದ ಎನ್.ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರ ಉದ್ಘಾಟನೆ ಎನ್.ಎಸ್.ಎಸ್. ವಿದ್ಯಾರ್ಥಿಗಳಿಗೆನಾಯಕತ್ವಗುಣಗಳನ್ನುಕಲಿಸಿಕೊಡುತ್ತದೆ

**ಮುಧೋಳ :** ರಾಷ್ಟ್ರೀಯ ಸೇವಾ ಯೋಜನೆಯು, ಯುವ ಜನತೆಗೆ ವಿಶೇಷ ವೇದಿಕೆಯನ್ನು ನಿರ್ಮಿಸಿಕೊಡುತ್ತಿದೆ. ವಿದ್ಯಾರ್ಥಿಗಳು ಅದನ್ನು ಉಪಯೋಗಿಸಿಕೊಳ್ಳಬೇಕು ಎಂದು ಬಾಗಲಕೋಟೆ ಜಿಲ್ಲಾ ಎನ್.ಎಸ್.ಎಸ್. ನೋಡಲ್ ಅಧಿಕಾರಿ ಎಂ. ಎ. ಪಾಟೋಳಿ ಹೇಳಿದರು.

ಸಮೀಪದ ಇಂಗಳಗಿ ಶ್ರೀ ಅಡವೇಶ್ವರ ಮಠದಲ್ಲಿ ಯಡಹಳ್ಳಿ ಶ್ರೀ ಎಸ್.ಬಿ ಹೊರಟ್ಟಿ ಸರಕಾರಿ ಪದವಿ ಪೂರ್ವ ಕಾಲೇಜು ವತಿಯಿಂದ ಹಮ್ಮಿಕೊಂಡ ಎನ್.ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳಿಗೆ ನಾಯಕತ್ವ ಗುಣಗಳನ್ನು ಕಲಿಸಿಕೊಡುತ್ತದೆ. ರಾಷ್ಟ್ರೀಯ ಸೇವಾ ಯೋಜನೆಯು




ಸಾಮರಸ್ಯ ಸಹಬಾಳ್ವೆಯ ಅರಿವು ಮೂಡಿಸುತ್ತದೆ.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ವ್ಹಿ.ಪಿ. ಪೆಟ್ಲೂರ ಮಾತನಾಡಿ ಜೀವನದ ಮೌಲ್ಯಗಳನ್ನು ಅರಿತುಕೊಳ್ಳಲು, ಕಠಿಣ ಪರಿಶ್ರಮದ ಸಾರವನ್ನು ಅರಿತುಕೊಳ್ಳಲು ಉತ್ತಮ ಅವಕಾಶವಿದೆ. ಶಿಬಿರಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು.

ಎನ್.ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರದ ಧ್ವಜಾರೋಹಣವನ್ನು ಇಂಗಳಗಿ ಗ್ರಾಮ ಪಂಚಾಯತ ಅಧ್ಯಕ್ಷ ರವಿ ಮೇತ್ರಿ ನೆರವೇರಿಸಿದರು. ಶಿಬಿರಾರ್ಥಿಗಳಿಗೆ ಎಸ್. ಐ. ಕುರಹಟ್ಟಿ ಪ್ರಮಾಣ ವಚನ ಬೋಧನೆ ಮಾಡಿಸಿದರು.

ಈ ವೇಳೆ ದಿವ್ಯ ಸಾನಿಧ್ಯವನ್ನು ಇಂಗಳಗಿಯ ಶ್ರೀ ಅಡವೇಶ್ವರ ಮಠದ ಶ್ರೀ ವೇ. ಮೂ. ಚಂದ್ರಶೇಖರ ಸ್ವಾಮೀಜಿ ವಹಿಸಿದ್ದರು, ಎನ್.ಎಸ್.ಎಸ್. ಶಿಬಿರಾಧಿಕಾರಿ ವಿಕ್ರಮ ಸೂರ್ಯವಂಶಿ,

ಇಂಗಳಗಿ ಗ್ರಾಮ ಪಂಚಾಯತಿ ಉಪಾಧ್ಯಕ್ಷೆ ಶಾಂತಾಬಾಯಿ ದಳವಾಯಿ, ಶಿಕ್ಷಕ ಪ್ರಕಾಶ ಯರಗಟ್ಟಿ, ರಮೇಶ ಜಮಖಂಡಿ ಮತ್ತು ಸರ್ವ ಉಪನ್ಯಾಸಕರು, ಶಿಬಿರಾರ್ಥಿಗಳು ಇದ್ದರು. ಆರ್.ಎಂ ಅಂಟಿನ ಸ್ವಾಗತಿಸಿದರು. ನಾಗಯ್ಯ ಮಠಪತಿ ನಿರೂಪಿಸಿದರು. ಎಲ್.ಎಂ. ಅಂಟಿನ ವಂದಿಸಿದರು.

# ಡಾ| ಬಿ.ಆರ್. ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿವಸ್ ಆಚರಣೆ




**ಲೋಕಾಪುರ :** ಡಾ. ಅಂಬೇಡ್ಕರ್ ಅವರು ಸಮಾಜ-ಕ್ಕೆ ನೀಡಿದ ಅಮೂಲ್ಯ ಕೊಡುಗೆಯನ್ನು ಸ್ಮರಿಸಲು ಭಾರತದಾದ್ಯಂತ ಮಹಾ ಪರಿನಿರ್ವಾಣ ದಿನವನ್ನು ಆಚರಿಸಲಾಗುತ್ತದೆ ಎಂದು ಪಟ್ಟಣ ಪಂಚಾಯತ ಮುಖ್ಯಾಧಿಕಾರಿ ಜ್ಯೋತಿ ಉಪ್ಪಾರ ಹೇಳಿದರು.

ಶುಕ್ರವಾರ ಪಟ್ಟಣ ಪಂಚಾಯತ ಕಾರ್ಯಾಲಯದಲ್ಲಿ ಡಾ|ಬಿ.ಆರ್.ಅಂಬೇಡ್ಕರ್‌ಅವರಮಹಾಪರಿನಿರ್ವಾಣ ದಿವಸ್ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಭಾರತದ ಘನ ಸಂವಿದಾನವನ್ನು ರಚಿಸಿದ ಸಂವಿಧಾನ ಶಿಲ್ಪಿ ಡಾ| ಬಿ.ಆರ್. ಅಂಬೇಡ್ಕರ್ ಅವರ ಮಹಾ ಪರಿನಿರ್ವಾಣ ದಿನದಂದು ಅವರನ್ನು ಕೃತಜ್ಞತಾ ಪೂರ್ವಕವಾಗಿ ನೆನೆಯುತ್ತೇವೆ ಎಂದರು.

ವೆಂಕಪ್ಪಗೌಡ ಚಿಂಚಖಂಡಿ, ರವಿ ರೊಡ್ಡಪ್ಪನವರ, ಕುಮಾರ ಕಾಳಮ್ಮನವರ, ಪಪಂ ಜೆಇ ಪ್ರಶಾಂತ ಪಾಟೀಲ, ಕಂದಾಯ ನೀರಿಕ್ಷಕ ಆಕಾಶ ರಾಯನ್ನವರ, ಆರೋಗ್ಯ ನೀರಿಕ್ಷಕಿ ಭಾಗ್ಯಾಶ್ರೀ ಪಾಟೀಲ, ದ್ವಿತೀಯ ದರ್ಜೆ ಸಹಾಯಕ ಕಾಶಿಲಿಂಗ ರೊಡ್ಡಪ್ಪನವರ, ಹಣಮಂತ ಹಳ್ಳಿಯವರ, ರಾಘವೇಂದ್ರ ಮುರಗೋಡ, ಗ್ಯಾನಪ್ಪ ರೊಡ್ಡಪ್ಪನವರ, ವಿಠ್ಠಲ ಗಸ್ತಿ ಇದ್ದರು.

# ತಾಹಶೀಲ್ದಾರರ ಮುಖಾಂತರ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದ ಭಾರತ ಕಮ್ಯುನಿಸ್ಟ್ ಪಕ್ಷ ಕೊಟ್ಟೂರು ತಾಲೂಕು ಮಂಡಳಿ

● ವಾರ್ತಾಲೋಕ ವಾರ್ತೆ

**ಕೊಟ್ಟೂರು: ಡಿಸೆಂಬರ್ 10 :** ಅದಾನಿ ಮೇಲಿನ ಲಂಚ ಪ್ರಕರಣದ ಕುರಿತು ಜೆಪಿಸಿ ಮೂಲಕ ತನಿಖೆ ನಡೆಸಲು ಒತ್ತಾಯಿಸಿ, ಮಣಿಪುರದಲ್ಲಿ ಶಾಂತಿ ಸ್ಥಾಪನೆಗೆ ಆಗ್ರಹಿಸಿ, ಕೋಮು ಭಾವನೆ ಕೆರಳಿಸಿ ಹಿಂಸಾಚಾರಕ್ಕೆ ಪ್ರಚೋದಿಸುತ್ತಿರುವುದನ್ನು ತಡೆಗಟ್ಟಲು ಒತ್ತಾಯಿಸಿ, ಬೆಲೆ ಏರಿಕೆ ನಿರುದ್ಯೋಗ ಸಮಸ್ಯೆ ಪರಿಹರಿಸುವಲ್ಲಿ ವಿಫಲವಾಗಿರುವ ಕೇಂದ್ರ ಸರ್ಕಾರದ ಜನ ವಿರೋಧಿ ಆಡಳಿತವನ್ನು ಖಂಡಿಸಿ ವಿಶ್ವ ಮಾನವ ಹಕ್ಕುಗಳ ದಿನವಾದ ಡಿಸೆಂಬರ್ 10 ರಂದು ಕೊಟ್ಟೂರು ತಹಶಿಲ್ದಾರ ಅಮರೇಶ್ ಜಿಕೆ ಅವರ ಮುಖಾಂತರ ಕಾರ್ಯಕರ್ತರ ಸಮ್ಮುಖದಲ್ಲಿ ಕೊಟ್ಟೂರು ತಾಲೂಕು ಸಹ ಕಾರ್ಯದರ್ಶಿ ಕೆ.ಕೊಟ್ರೇಶ ಮನವಿಯನ್ನು ಸಲ್ಲಿಸಿದರು.

ಆಡಳಿತ ನಡೆಸಲು ಬೇಕಾದ ಸರಳ ಬಹುಮತಗಳನ್ನು ಪಡೆಯಲಾಗದ ಬಿಜೆಪಿ ಇತರೆ ಪ್ರಾದೇಶಿಕ ಪಕ್ಷಗಳ ಬೆಂಬಲದೊಂದಿಗೆ ಮೂರನೇ ಬಾರಿಗೆ ಅಧಿಕಾರದಲ್ಲಿ ಮುಂದುವರಿದಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪ್ರಜಾತಂತ್ರ ವಿರೋಧಿ ಆಡಳಿತವನ್ನು ಮುಂದುವರಿಸಿದೆ. ದೇಶದಲ್ಲಿ ರೈತ ಕಾರ್ಮಿಕರ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮುಖ್ಯತೆ ನೀಡದೆ ಅದಾನಿ ಅಂಬಾನಿಯಂತಹ ಬಂಡವಾಳಶಾಹಿಗಳ ಹಿತಾಸಕ್ತಿಗಾಗಿಯೇ ಅಧಿಕಾರ ಬಳಕೆಯಾಗುತ್ತಿದೆ.

ನರೇಂದ್ರ ಮೋದಿ ಅವರ ಆಡಳಿತದಲ್ಲಿ ದೇಶ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದ್ದು ದೇಶದ ಜಿಡಿಪಿ ನಿರಂತರವಾಗಿ ಕುಸಿಯುತ್ತಿದೆ. ನಿರುದ್ಯೋಗಿಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದ್ದುಅಗತ್ಯವಸ್ತುಗಳಬೆಲೆಏರಿಕೆಯಿಂದಾಗಿ ಜನಸಾಮಾನ್ಯರು ಸಂಕಷ್ಟದಲ್ಲಿಯೇ ಬದುಕು ನಡೆಸುವಂತಾಗಿದೆ. ಸಂವಿಧಾನದ ಬಹುತ್ವದ ಆಶಯಗಳಿಗೆವಿರುದ್ಧವಾಗಿಏಕತ್ವದಪ್ರತಿಪಾದನೆ ಮುಂದುವರಿಸಿರುವಮೋದಿಸರ್ಕಾರಒಕ್ಕೂಟ ವ್ಯವಸ್ಥೆಗೆ ಮಾರಕವಾಗಲಿರುವ 'ಒಂದು ದೇಶ ಒಂದು ಚುನಾವಣೆ' ಎಂಬ ವಿಷಯವನ್ನು ಪದೇ ಪದೇ ಮುನ್ನೆಲೆಗೆ ತರುತ್ತಿದೆ. ಮಣಿಪುರ, ಉತ್ತರ ಪ್ರದೇಶಗಳು ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ಜಾತಿ ಜನಾಂಗೀಯ ಸಂಘರ್ಷಗಳು, ಕೋಮು ಭಾವನೆ ಕೆರಳಿಸಿ ಹಿಂಸಾಚಾರಗಳು ಭುಗಿಲೇಳುತ್ತಿದ್ದರೂ ಶಾಂತಿ ಸೌಹಾರ್ದತೆ ಬಲಪಡಿಸುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಈ ಹಿನ್ನೆಲೆಯಲ್ಲಿ ವಿಶ್ವಮಾನವ ಹಕ್ಕುಗಳ ದಿನವಾದ ಇಂದು ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ) ದೇಶಾದ್ಯಂತ ಪ್ರತಿಭಟನಾ ದಿನವಾಗಿ ಆಚರಿಸಲುಕರೆನೀಡಿದ್ದುಈಕೆಳಗಿನಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸುತ್ತದೆ.

1) ಆದಾನ ಮೇಲಿನ ಲಂಚ ಪ್ರಕರಣದ ಕುರಿತು ಜೆಪಿಸಿ ಮೂಲಕ ಸಮಗ್ರ ತನಿಖೆ ನಡೆಸಿ: ಗೌತಮ್ ಆದಾನ ತಮ್ಮ ಸಂಸ್ಥೆಯ ಪರವಾಗಿ



ವ್ಯಾಪಾರ ವಹಿವಾಟು ಒಪ್ಪಂದ ಮಾಡಿಕೊಳ್ಳಲು ಭಾರತದ ಸರ್ಕಾರಿ ಅಧಿಕಾರಿಗಳು ಸೇರಿದಂತೆ ಹಲವರಿಗೆ ಸಾವಿರಾರು ಕೋಟಿ ರೂಪಾಯಿ ಲಂಚ ನೀಡಿದ್ದಾರೆಂದು ಅಮೆರಿಕಾದ ಪ್ರಾಸಿಕ್ಯೂಟರ್ಗಳು ಗಂಭೀರ ಸ್ವರೂಪದ ಆರೋಪ ಮಾಡಿದ್ದಾರೆ. ಲಾಭದಾಯಕವಾದ ಸೌರಶಕ್ತಿಯ ಪೂರೈಕೆಯಂತಹ ಉದ್ದಿಮೆಗಳನ್ನು ಗುತ್ತಿಗೆ ಪಡೆಯಲು ಸಾವಿರಾರು ಕೋಟಿ ರೂಪಾಯಿ ಲಂಚ ನೀಡಿದ್ದಾರೆ ಎಂಬ ನ್ಯೂಯಾರ್ಕ್ ಪ್ರಾಸಿಕ್ಯೂಟರ್‌ಗಳ ದೋಷಾರೋಪಣೆಗಳ ಸತ್ಯಾಸತ್ಯತೆಯನ್ನು ಅರಿಯಲು ಹಾಗೂ ಇದರಲ್ಲಿ ಕೇಂದ್ರ ಸರ್ಕಾರದ ಪಾತ್ರ ಸೇರಿದಂತೆ ಸಮಗ್ರ ತನಿಖೆ ನಡೆಸಲು ಸಂಸತ್ತಿನ ಜಂಟಿ ಸಂಸದೀಯ ಸಮಿತಿಯನ್ನು ರಚಿಸಿ (ಜೆಪಿಸಿ) ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಸಿಪಿಐ ಆಗ್ರಹಪಡಿಸುತ್ತದೆ.

2) ಮಣಿಪುರದಲ್ಲಿ ಶಾಂತಿ ಸ್ಥಾಪನೆಗೆ ಆಗ್ರಹ: ಮಣಿಪುರದಲ್ಲಿ ಮೈತೆಯಿ ಮತ್ತು ಕುಕ್ಕಿ ಸಮುದಾಯಗಳ ನಡುವೆ ನಿರಂತರವಾಗಿ ನಡೆಯುತ್ತಿರುವ ಜನಾಂಗೀಯ ಸಂಘರ್ಭವನ್ನು ತಡೆದು ಶಾಂತಿ ಸ್ಥಾಪಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ಜನಾಂಗೀಯ ಸಂಘರ್ಷದಲ್ಲಿ ಅಪಾರ ಸಂಖ್ಯೆಯ ಸಾವು ನೋವುಗಳು ಸಂಭವಿಸುತ್ತಿದ್ದು ಸುಮಾರು 60 ಸಾವಿರಕ್ಕೂ ಹೆಚ್ಚು ಜನ ನಿರಾಶ್ರಿತರು ಕಳೆದ ಒಂದು ವರ್ಷಕ್ಕಿಂತಲೂ ಹೆಚ್ಚು ನಿರಾಶ್ರಿತರ ಶಿಬಿರದಲ್ಲಿ ತಂಗುವಂತಹ ದಾರುಣ ಪರಿಸ್ಥಿತಿ ನಿರ್ಮಾಣಗೊಂಡಿದೆ. ಮಣಿಪುರದಲ್ಲಿ ಶಾಂತಿ ನೆಲೆಸಲು ಅನುಕೂಲವಾಗುವಂತೆ ಅಲ್ಲಿನ ಪರಿಸ್ಥಿತಿಯ ಕುರಿತು ಸಂಸತ್ತಿನಲ್ಲಿ ಚರ್ಚಿಸಬೇಕು ಹಾಗೂ ಮಣಿಪುರದಲ್ಲಿ ಹೇರಲಾಗಿರುವ ಸಶಸ್ತ್ರ ಪಡೆಗಳ ವಿಶೇಳ ಅಧಿಕಾರ ಕಾಯ್ದೆಯನ್ನು (ಂಈಖಕಂ) ಹಿಂಪಡೆದು ಶಾಂತಿ ಸ್ಥಾಪನೆಗೆ ಮುಂದಾಗಬೇಕೆಂದು ಸಿಪಿಐ ಒತ್ತಾಯಿಸುತ್ತದೆ.

3) ಕೋಮು ಭಾವನೆ ಕೆರಳಿಸುವ ಕೃತ್ಯಗಳನ್ನು ತಡೆಗಟ್ಟುವಂತೆ ಆಗ್ರಹಿಸಿ: ಉತ್ತರಪ್ರದೇಶ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ಕೋಮು ಭಾವನೆ ಕೆರಳಿಸಿ ಹಿಂಸಾಚಾರಕ್ಕೆ ಪ್ರಚೋದಿಸುವಂತಹ ಕೃತ್ಯಗಳು ನಿರಂತರವಾಗಿ ನಡೆಯುತ್ತಿವೆ. ಮಸೀದಿ ಮಂದಿರಗಳ ವಿವಾದ ಕೇಂದ್ರವಾಗಿಸಿ ಧಾರ್ಮಿಕ ಸಾಮರಸ್ಯವನ್ನು ಹಾಳುಗೆಡುವಲು ಕೋಮುವಾದಿ ಶಕ್ತಿಗಳು ನಿರತವಾಗಿವೆ. ಪ್ರಚೋದನಕಾರಿ ಹೇಳಿಕೆಗಳ ಮೂಲಕ ಶಾಂತಿ ಸೌಹಾರ್ದತೆಯನ್ನು ಕದಡುವಂತಹ ಕೃತ್ಯಗಳು ದಿನೇ ದಿನೇ ಹೆಚ್ಚುತ್ತಿವೆ. ಕೋಮು ಭಾವನೆ ಕೆರಳಿಸುವ ಕೃತ್ಯಗಳಿಗೆ ಕಡಿವಾಣ ಹಾಕಲು ಕಠಿಣ ಕ್ರಮ ಜರುಗಿಸಬೇಕೆಂದು ಸಿಪಿಐ ಆಗ್ರಹಿಸುತ್ತದೆ.

4) ಬೆಲೆ ಏರಿಕೆ ತಡೆಗಟ್ಟಿ ನಿರುದ್ಯೋಗ ಸಮಸ್ಯೆ ಪರಿಹರಿಸಿ: ದೇಶದ ಆರ್ಥಿಕ ಪರಿಸ್ಥಿತಿ ತೀರಾ ಹದಗೆಟ್ಟಿದ್ದು ಜನಪರವಾದ ಆರ್ಥಿಕ ಧೋರಣೆ ಹಾಗೂ ಔದ್ಯಮಿಕ ನೀತಿಯನ್ನು ಜಾರಿಗೊಳಿಸುವಲ್ಲಿ ಕೇಂದ್ರ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ದೇಶದಲ್ಲಿ ನಿರುದ್ಯೋಗ ಸಮಸ್ಯೆ ಉಲ್ಬಣಿಸುತ್ತಿದೆ. ಜನಸಾಮಾನ್ಯರು ದಿನನಿತ್ಯ ಉಪಯೋಗಿಸುವ ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರಿವೆ. ಬೆಲೆ ಏರಿಕೆ ಹಾಗೂ ನಿರುದ್ಯೋಗ ಸಮಸ್ಯೆಯು ಜನರ ಬದುಕನ್ನು ದುಸ್ತರಗೊಳಿಸಿದೆ. ಬೆಲೆ ಏರಿಕೆಯನ್ನು ತಡೆಗಟ್ಟಿ ನಿರುದ್ಯೋಗ ಸಮಸ್ಯೆ ನಿವಾರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಿಪಿಐ ಒತ್ತಾಯಿಸುತ್ತದೆ


ಈ ಮೇಲಿನ ಬೇಡಿಕೆಗಳನ್ನು ಈಡೇರಿಸುವ ಮೂಲಕ ಸಂವಿಧಾನದ ಆಶಯಗಳಿಗನುಗುಣವಾಗಿ ಮಾನವ ಹಕ್ಕುಗಳನ್ನು ರಕ್ಷಿಸಲು ಮುಂದಾಗಬೇಕೆಂದು ಮನವಿ ಪತ್ರದಲ್ಲಿ ತಿಳಿಸಲಾಗಿದೆ.ಎಂದು ಭಾರತ ಕಮ್ಯುನಿಸ್ಟ್ಪಕ್ಷದತಾಲೂಕುಸಹಕಾರ್ಯದರ್ಶಿ ಕೆ ಕೊಟ್ರೇಶ್,ಪಿ ಚಂದ್ರಶೇಖರ್,ಅಂಜನಿ ಎಲ್, ಮಂಜುನಾಥ್ ಭಜಂತ್ರಿ,ಚೆನ್ನ್, ಪ್ರಕಾಶ್, ಇತರರು ಇದ್ದರು.

**ವರದಿ ಪರಶುರಾಮ್**

# ರೈತರ ಆತ್ಮಹತ್ಯೆ: ತಲಾ 5 ಲಕ್ಷ ಪರಿಹಾರದ ಆದೇಶ ಪ್ರತಿ ವಿತರಿಸಿದ ಶಾಸಕ ಲಕ್ಷ್ಮಣ ಸವದಿ

● ವಾರ್ತಾಲೋಕ ವಾರ್ತೆ

**ಅಥಣಿ :** ಇತ್ತೀಚೆಗೆ ಸಾಲಬಾಧೆ ತಾಳಲಾರದೆ ಮನನೊಂದು ಆತ್ಮಹತ್ಯೆಗೆ ಶರಣಾಗಿದ್ದ ಶೇಗುಣಸಿ ಗ್ರಾಮದ ರೈತ ಹಣಮಂತ ನಿಂಗಪ್ಪ ಪಿರಗಿ, ಕಕಮರಿ ಗ್ರಾಮದ ರೈತ ಮಲ್ಲಪ್ಪ ಗುರಪ್ಪ ಜನಗೌಡ ಹಾಗೂ ಸತ್ತಿ ಗ್ರಾಮದ ರೈತ ಮುತ್ತಪ್ಪ ಪಾಂಡಪ್ಪ ಗಸ್ತಿ ಇವರುಗಳ ಕುಟುಂಬಸ್ಥರಿಗೆ ಮಾಜಿ ಉಪಮುಖ್ಯಮಂತ್ರಿ ಹಾಗೂ ಹಾಲಿ ಶಾಸಕ ಲಕ್ಷ್ಮಣ ಸವದಿ ಅವರು ಕೃಷಿ ಇಲಾಖೆಯಿಂದ ಮಂಜೂರಾದ ತಲಾ 5 ಲಕ್ಷ



ರೂಪಾಯಿಗಳ ಪರಿಹಾರ ಧನದ ಆದೇಶ ಪ್ರತಿ ವಿತರಿಸಿ ಮೃತ ರೈತ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

ಆದೇಶ ಪ್ರತಿ ವಿತರಿಸಿ ಶಾಸಕ ಲಕ್ಷ್ಮಣ ಸವದಿ ಅವರು ಮಾತನಾಡಿ ಪ್ರತಿಯೊಂದಕ್ಕೂ ಆತ್ಮಹತ್ಯೆಯೇ ಪರಿಹಾರವಲ್ಲ ರೈತರ ಜೀವಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ ಯಾವುದೇ ಕಾರಣಕ್ಕೂ ರೈತರು ದುಡುಕಿ ಆತ್ಮಹತ್ಯೆಯಂತಹ ನಿರ್ಧಾರ ತೆಗೆದುಕೊಳ್ಳಬಾರದು. ನಾನು ಸದಾ ನಿಮ್ಮೊಂದಿಗೆ ಇದ್ದೇನೆ ಏನೇ ಸಮಸ್ಯೆ ಬಂದರೂ ನನಗೆ ಸಂಪರ್ಕಿಸಿ ಎಂದರು

ಈ ವೇಳೆ ಕೃಷಿ ಇಲಾಖೆಯ ಅಧಿಕಾರಿ ನಿಂಗನಗೌಡ ಬಿರಾದಾರ. ಜಡೇಪ್ಪ ಕುಂಬಾರ. ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಕುರುಗೋಡು ಪಟ್ಟಣದ ಉಜ್ಜಲಪೇಟೆಯಲ್ಲಿ ಪರಮಪೂಜ್ಯ ಶ್ರೀವಿದ್ಯಾನಂದಭಾರತಿ ಮಹಾಸ್ವಾಮಿಯವರಿಗೆ ಏಷ್ಯಾಇಂಟರ್‌ನ್ಯಾಷನಲ್ ಕಲ್ಚರ್ ರೀಸರ್ಚ ಯೂನಿವರ್ಸಿಟಿ ನೀಡಲಾಗಿರುವ ಗೌರವಡಾಕ್ಟರೇಟ್ ಪದವಿನೀಡಿದ್ದರಿಂದ ಉಜ್ಜಲಪೇಟೆ ಭಕ್ತರು ಶಿವಾನಂದಭಾರತಿ ಮಹಾಸ್ವಾಮಿಯವರಿಗೆ ಹೂಗುಚ್ಛನೀಡಿ ಸನ್ಮಾನಿಸಿ, ಗೌರವಿಸಿದರು. ಈ ಸಂದರ್ಭದಲ್ಲಿ ಉಜ್ಜಲಪೇಟೆಯ ಭಕ್ತರು.

# ಮಲ್ಲ ಕಂಬ ಸ್ಪರ್ಧೆಯಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆ




**ಮೂಡಲಗಿ :** ಪಟ್ಟಣದ ಚೈತನ್ಯ ಆಶ್ರಮ ವಸತಿ ಶಾಲೆಯಲ್ಲಿ ಮಲ್ಲಕಂಬದಲ್ಲಿ ವಿಜೇತ ಬಾಲಕನಿಗೆ ಗುರು ಬಳಗದಿಂದ ಸನ್ಮಾನಿಸಲಾಯಿತು. ಕರ್ನಾಟಕ ಮಲ್ಲಕಂಬ ಅಸೋಸಿಯೇಷನ್ ಲಕ್ಷ್ಮೇಶ್ವರ ಹಾಗೂ ಚಂದ್ರಯ್ಯ ಎಮ್. ಪಂಚಕಟ್ಟಿನಮಠ ಪದವಿ ಪೂರ್ವ ಮಹಾವಿದ್ಯಾಲಯ ಲೋಕಾಪೂರ ಇವರುಗಳ ಆಶ್ರಯದಲ್ಲಿ ನಡೆದ "ರಾಜ್ಯಮಟ್ಟದ ಮಲ್ಲಕಂಬ" ಸ್ಪರ್ಧೆಯಲ್ಲಿ 18 ವರ್ಷದೊಳಗಿನ ಬಾಲಕರ ಮಲ್ಲಕಂಬ ಸ್ಪರ್ಧೆಯಲ್ಲಿ ಮೂಡಲಗಿಯ ಚೈತನ್ಯ ಆಶ್ರಮ ವಸತಿ ಶಾಲೆಯ ವಿದ್ಯಾರ್ಥಿ ಶಿವಪ್ರಸಾದ ಕಡಾಡಿ ಆರು ಸ್ಥಾನ ಪಡೆದು "ರಾಷ್ಟ್ರ ಮಟ್ಟಕ್ಕೆ" ಆಯ್ಕೆ ಯಾಗುವುದರ ಜೊತೆಯಲ್ಲಿ ಖೇಲೋ ಇಂಡಿಯಾ ಯುಥ್ ಗೇಮಿಗೆ ಆಯ್ಕೆಯಾಗಿದ್ದಾನೆ.

ರಾಷ್ಟ್ರ ಮಟ್ಟದ ಸ್ಪರ್ಧೆ ಉತ್ತರ ಪ್ರದೇಶ ಹಾಗೂ ಖೇಲೋ ಇಂಡಿಯಾ ಮಧ್ಯಪ್ರದೇಶದಲ್ಲಿ ಜರುಗುತ್ತವೆ.

ಸಾಧನೆಗೈದ ವಿದ್ಯಾರ್ಥಿ ಶಿವಪ್ರಸಾದ ಕಡಾಡಿಗೆ ಚೈತನ್ಯ ಶಾಲೆಯಲ್ಲಿ ಅಭಿನಂದಿಸಿ ಹಾರೈಸಿದರು. ಸಂಸ್ಥೆಯ ಅಧ್ಯಕ್ಷೆ ರುಕ್ಮಿಣಿ ಹೊರಟ್ಟಿ, ಕಾರ್ಯದರ್ಶಿ ವಾಯ್. ಬಿ. ಪಾಟೀಲ, ಆಡಳಿತಾಧಿಕಾರಿ ಎಸ್. ಎಮ್. ಕಮದಾಳ, ಮಲ್ಲಕಂಬ ತರಬೇತಿದಾರ ಮೆಹಬೂಬ್ ಬಂಡಿವಾಡ, ಶಿಕ್ಷಕರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಡಿ.13ರಂದು ಹಕ್ಕೊತ್ತಾಯಗಳಿಗಾಗಿ ಸುವರ್ಣಸೌಧ ಚಲೋ

**ರಬಕವಿ-ಬನಹಟ್ಟಿ :** ಇಲ್ಲಿನ ಕೆ. ಎಚ್. ಡಿ. ಸಿ. ನೇಕಾರರು ತಮ್ಮ ವಿವಿಧ ಹಕ್ಕೊತ್ತಾಯಗಳಿಗೆ ಆಗ್ರಹಿಸಿ ಪ್ರತಿಭಟನೆಯನ್ನು ನಡೆಸುತ್ತಿದ್ದು, ಶನಿವಾರ ನಗರದ ಪ್ರಮುಖ ಬೀದಿಗಳಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿ ಜಮಖಂಡಿ ಕುಡಚಿ ರಾಜ್ಯ ಹೆದ್ದಾರಿಯ ಮೇಲೆ ಕುಳಿತು ಕೆಲವು ಸಮಯ ರಸ್ತೆ ತಡೆ ಮಾಡಿ ಪ್ರತಿಭಟನೆ ನಡೆಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘದ ಅಧ್ಯಕ್ಷ ಶಿವಲಿಂಗ ಟಿರಕಿ ಮಾತನಾಡಿ, ರಾಜ್ಯದಲ್ಲಿ ಸಾಕಷ್ಟು ವೃತ್ತಿಪರ ನೇಕಾರರು ಆತ್ಮಹತ್ಯೆಯನ್ನು ಮಾಡಿಕೊಂಡರೂ, ಸರ್ಕಾರ ಮಾತ್ರ ಯಾವುದೇ ಪರಿಹಾರ ನೀಡುತ್ತಿಲ್ಲ. ರಾಜ್ಯದ ರಬಕವಿ, ಬನಹಟ್ಟಿ, ಗದಗ ಬೆಟಗೇರಿ, ಹುಬ್ಬಳ್ಳಿಯಲ್ಲಿ ನೂರಾರು ಜನ ನೇಕಾರರು ನಿವೇಶನ ಇಲ್ಲದೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಂಥವರಿಗೆ ಆದಷ್ಟು ಬೇಗನೆ ಹಕ್ಕುಪತ್ರಗಳನ್ನು ನೀಡುವ ನಿಟ್ಟಿನಲ್ಲಿ ಇಲಾಖೆ ಮತ್ತು ಸರ್ಕಾರ ಗಮನ ನೀಡಬೇಕು. ಕೈಮಗ್ಗ ನೇಕಾರರು ಮೂಲ ಸೌಕರ್ಯಗಳಿಂದ ವಂಚಿತರಾಗುತ್ತಿದ್ದಾರೆ. 7,968 ಜನರಿಗೆ ಅಕ್ರಮ ಸಕ್ರಮವಾಗಿದ್ದು ಅಂತಿಮ ಆದೇಶ ಬಾರದೆ ಅವರಿಗೆ ತೊಂದರೆಯಾಗಿದೆ. ಕೈಮಗ್ಗ ನೇಕಾರರ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುವ ದಿಶೆಯಲ್ಲಿ ಡಿಸೆಂಬರ್ 13 ರಂದು ಸುವರ್ಣಸೌಧ ಚಲೋ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಟಿರಕಿ ತಿಳಿಸಿದರು.

ರಬಕವಿ ಬನಹಟ್ಟಿ ತಹಶೀಲ್ದಾರ್ ಗಿರೀಶ ಸ್ವಾದಿಯವರಿಗೆ ನೇಕಾರರು ಮನವಿಯನ್ನು ಸಲ್ಲಿಸಿದರು.

ನೇಕಾರರು ರಸ್ತೆಯನ್ನು ತಡೆದಿದ್ದರಿಂದ ಸಂಚಾರಕ್ಕೆ ತೊಂದರೆಯಾಯಿತು.

ಅರ್ಜುನ ಗುಟ್ಲಿ, ಬಸಪ್ಪ ಅಮಟಿ, ಯಾಸೀನ್ ಮುಜಾವರ್, ಶಂಕರ ಕೊಣ್ಣೂರ, ಶ್ರೀಶೈಲ ಗಂಜಾಳ, ಜೈಬುನ್ ಅಥಣಿ, ಸುಮಿತ್ರಾ ಜಾಲಿಕಟ್ಟಿ, ಹೇಮಾ ಗೊಂದಕರ, ಅನಸೂಯಾ ಹೆಬ್ಬಾಳ, ಫಾತಿಮಾ ನದಾಫ, ಬೌರವ್ವ ಮಠದ ಸೇರಿದಂತೆ ನೂರಾರು ನೇಕಾರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಜಮಖಂಡಿ: ವಕೀಲರ ದಿನಾಚರಣೆ

**ಜಮಖಂಡಿ :** ಡಿಸೆಂಬರ್ ಐದರಂದು ವಕೀಲರ ದಿನಾಚರಣೆಯನ್ನು ಜಮಖಂಡಿಯ ರೋಟರಿ ಕ್ಲಬ್ ವತಿಯಿಂದ ಆಚರಿಸಲಾಯಿತು. ರೋಟರಿ ಕ್ಲಬ್ ಅಧ್ಯಕ್ಷರಾದ ಕಿರಣ್ ಕುಮಾರ್ ದೇಸಾಯಿ, ಜಿ. ಬಿ. ಕೌಜಲಗಿ, ಅತ್ತಾರ, ಹಿರೇಮಠ, ನ್ಯಾಮಗೌಡ ಮುಂತಾದವರು ಆಚರಿಸಿದರು. ಹಿರಿಯ ವಕೀಲರಾದ ಎನ್.ಎಸ್. ದೇವರವರ ಅವರನ್ನು ಅತಿಥಿಯಾಗಿ ಆಮಂತ್ರಿಸಿದ್ದರು. ಅವರು ತಮ್ಮ ಭಾಷಣದಲ್ಲಿ ಡಿಸೆಂಬರ್ 3 ರಂದು ಭಾರತರತ್ನ ರಾಜೇಂದ್ರ ಪ್ರಸಾದ್ ಅವರ ಜನ್ಮದಿನವನ್ನು ವಕೀಲರ ದಿನವನ್ನಾಗಿ ಆಚರಿಸಲಾಗುತ್ತಿದೆ. ರಾಜೇಂದ್ರ ಪ್ರಸಾದ್ ಅವರು 1884 ಡಿಸೆಂಬರ್ 3 ರಂದು ಕಾಯಸ್ಥ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಪಾಟ್ನಾದಲ್ಲಿ ವಿದ್ಯಾಭ್ಯಾಸ ಮುಗಿಸಿ ಕಾನೂನು ಪದವಿ ಪಡೆದು, ಅಲಹಾಬಾದನಲ್ಲಿ ಕಾನೂನು ವಿಷಯದಲ್ಲಿ ಪಿಎಚ್ಡಿ ಮಾಡಿ, ಎಂ. ಎ. ಎಕಾನಾಮಿಕ್ಸ ಮಾಡಿ ಬಿಹಾರ ಮತ್ತು ಒರಿಸ್ಸಾದ ಹೈಕೋರ್ಟ್ ನಲ್ಲಿ ವಕೀಲರಾಗಿ ಸೇವೆ ಸಲ್ಲಿಸಿದರು. ದೇಶದ




ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಹಲವು ಬಾರಿ ಜೈಲು ವಾಸ ಅನುಭವಿಸಿದರು. ಅವರು ಸಂವಿಧಾನ ಸಮಿತಿ ಅಧ್ಯಕ್ಷರಾಗಿ 1946 ಡಿಸೆಂಬರ್ ರಿಂದ 1949 ನವ್ವೆಂಬರ 26 ವರೆಗೆ ಸಂವಿಧಾನ ರಚನೆಯಾಗಿ, ಅಂಗಿಕಾರ ಆಗಿ 1950 ಜನೆವರಿ 26 ರಿಂದ 1952 ಹಾಗೂ 1957 ರಿಂದ 1962 ರವರೆಗೆ ಭಾರತದ ಪ್ರಥಮ ರಾಷ್ಟ್ರಪತಿ ಆಗಿದ್ದರು. 1963 ರಲ್ಲಿ ನಿಧನರಾದರು. ಸಂವಿಧಾನ ರಚನೆ ಮಾಡುವಲ್ಲಿ ಅವರ ಪಾತ್ರ ಅಪಾರ. ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ನಂತರ ಅವರು ಸಲ್ಲಿಸಿದ ಸೇವೆ ಗುರುತಿಸಿ ಅವರ ಜನ್ಮದಿನದಂದು ವಕೀಲರ ದಿನಾಚರಣೆ ಆಚರಿಸಲಾಗುತ್ತಿದೆ.

ವಕೀಲರ ದಿನಾಚರಣೆಯಂದು, ದೇಶ ಕಟ್ಟುವಲ್ಲಿ, ಅಭಿವೃದ್ಧಿಯಲ್ಲಿ, ಕಾನೂನು ರಚನೆಯಲ್ಲಿ, ಕೋಟ9 ಮೂಲಕ ದೇಶದಲ್ಲಿ ಹಲವು ಕ್ಷೇತ್ರಗಳಲ್ಲಿ ಸಾಧನೆಗೈದಿದ್ದಾರೆ. ಈ ಎಲ್ಲ ಸವಿನೆನಪಿಗಾಗಿ ವಕೀಲರ ದಿನಾಚರಣೆ.

ನಾನು ಪಿಐಎಲ್ ಮೂಲಕ, 1) ಸೌಂದತ್ತಿ ಎಲ್ಲಮ್ಮ ದೇವಿಯ ದರ್ಶನಕ್ಕೆ ಹಾಕಿದ ಟೋಲ್ ರದ್ದತಿ, 2) ಘಟಪ್ರಭಾ ಜಲಾನಯನ ಪ್ರದೇಶದಲ್ಲಿ ಕಬ್ಬು ಬೆಳೆಗಾರರಿಗೆ ರೂ. 500 ದಂಡ ವಿಧಿಸಿದ ಸರ್ಕಾರದ ಆದೇಶ ವಿರುದ್ಧ ಪ್ರಶ್ನಿಸಿ, ರದ್ದು ಮಾಡಿಸಿದ್ದು, 3) ಸೋಮಯ್ಯ ಸಕ್ಕರೆ ಕಾರ್ಖಾನೆ ಹಾಗೂ ಡಿಸ್ಟಿಲರಿ ಯಿಂದ ಪರಿಸರಕ್ಕೆ ಧಕ್ಕೆ ಉಂಟಾದಾಗ ಪ್ರಶ್ನೆ ಮಾಡಿ, ರೈತರಿಗೆ ನೇರವಾಗಿ, ಹಾಗೂ 42 ಕೋಟಿ ರೂಪಾಯಿ ವೆಚ್ಚದಲ್ಲಿ ಎಲ್ಲಾ ಪರಿಸರ ಸಮಸ್ಯೆಗಳಿಗೆ ಪರಿಹಾರ ಮಾಡಿಸುವಲ್ಲಿ ಆದ ತೀರ್ಪು. ಅಲ್ಲದೆ ಇಂತಹ ಹಲವು ವಿಷಯಗಳ ಕುರಿತು ಅನುಭವದ ವಿಚಾರಗಳನ್ನು ಹಂಚಿಕೊಂಡರು.

ಅದೊಂದು ಅಪರೂಪದ ವಕೀಲರ ದಿನಾಚರಣೆಯನ್ನಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಎನ್.ಎಸ್. ದೇವರವರ ಅವರನ್ನು ಸನ್ಮಾನಿಸಲಾಯಿತು.

# ಅಂಬೇಡ್ಕರ್ ದೇಶಕ್ಕೆ ಸಂವಿಧಾನ ಕೊಟ್ಟ ಮಹಾಚೇತನ

**ಮೂಡಲಗಿ :** ಡಾ. ಬಾಬಾ ಸಾಹೇಬ ಅಂಬೇಡ್ಕರ್ ಅವರು ಸಮಾಜದಲ್ಲಿನ ಜಾತಿ ವೈಶಮ್ಯ ಅದರ ನೋವು ಕಷ್ಟ ಹೋರಾಟವನ್ನು ಅನುಭವಿಸಿ ರೋಷ ಹೋಗಿ ತನ್ನ ಜನ ತನ್ನ ಕುಲ ತನ್ನ ದೇಶ ಎಂಬ ಅಭಿಮಾನವನ್ನು ಬೆಳೆಸಿಕೊಂಡು ತನ್ನಲ್ಲಿ ಪರಿವರ್ತನೆಯನ್ನು ಮಾಡಿಕೊಂಡು ಉನ್ನತ ಕಾನೂನು ವ್ಯಾಸಂಗ ಮಾಡಿ ದೇಶಕ್ಕೆ ಸಂವಿಧಾನ ಎಂಬ ಸಮಾನತೆಯ ಕಾನೂನಿನ ಶ್ರೀರಕ್ಷೆ ಕೊಟ್ಟ ಮಹಾಚೇತನ ಎಂದು ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ. ವಿಷ್ಣು ಬಾಗಡಿ ಹೇಳಿದರು.

ಮೂಡಲಗಿ ಶಿಕ್ಷಣ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದಲ್ಲಿ



ಹಮ್ಮಿಕೊಂಡಿದ್ದ ಸಂವಿಧಾನ ಶಿಲ್ಪಿ ಭಾರತರತ್ನ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ 68 ನೇ ಮಹಾ ಪರಿನಿರ್ವಾಣದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯ ಪ್ರೊ. ಜಿ. ವ್ಹಿ. ನಾಗರಾಜ, ಪುಸ್ತಕ ಪ್ರೇಮಿಯಾಗಿದ್ದ ಅಂಬೇಡ್ಕರ್ ಅವರ ತತ್ವ, ಸಿದ್ಧಾಂತ, ಆದರ್ಶಗಳನ್ನು ನಾವು ಪಾಲಿಸಿಕೊಂಡು ಹೋದರೆ ಅದೇ ನಾವು ಅವರಿಗೆ ಸಲ್ಲಿಸುವ ನಮನವಾಗಿದೆ ಎಂದರು.

ಸಮಾರಂಭದಲ್ಲಿ ರಾಷ್ಟ್ರೀಯ ಸೇವಾ ಯೋಜನಾಧಿಕಾರಿ ಡಾ. ಎಸ್. ಎಲ್. ಚಿತ್ರಗಾರ, ಗ್ರಂಥಪಾಲಕ ಡಾ. ಬಸವಂತ ಬರಗಾಲಿ, ವ್ಹಿ. ಆಯ್. ಬೈರನಟ್ಟಿ, ಎಸ್. ಕೆ. ಸವಸುದ್ದಿ, ಎಸ್. ಕೆ. ಕೊತ್ತಲ, ಪ್ರೀತಿ ಬೆಳಗಲಿ, ಮನೋಹರ ಲಮಾಣಿ, ಕಲ್ಮೇಶ ಇಂಗಳೆ, ಲಕ್ಷ್ಮಣ ನಂದಿ, ರಮೇಶ ಖಾನಪ್ಪಗೋಳ ಮುಂತಾದವರು ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ ಪ್ರೊ. ಲೋಕೇಶ ಹಿಡಕಲ್ಲ ಸ್ವಾಗತಿಸಿದರು. ಪ್ರೊ. ಎ. ಎಸ್. ಮೀಸಿನಾಯಿಕ ಕಾರ್ಯಕ್ರಮ ನಿರ್ವಹಿಸಿ ಕೊನೆಗೆ ವಂದಿಸಿದರು.

VARTHA LOKA Kannada Daily Morning News Paper Printed at NIKHIL OFFSET PRINTES Ward No. 23, Buddha Circle, Hosalli Main Road, GANGAVATHI-583227. Dist: Koppal,
Editor & Published by Mohammed jeelan. G., Rajasab Compound, Opp. Kulayappa Building, 1st Cross, Patel Nagar, HOSPET Dist : Vijaynagar, Mob. No.: 9482156289 E-Mail: Varthalokahpt@gmail.com